ಅಧ್ಯಾಯ
೬

# ಬ್ಯಾಂಕಿಂಗ್, ಸಹಕಾರ, ವಾಣಿಜ್ಯ ಮತ್ತು ವ್ಯವಹಾರ



**ಕ**ರ್ನಾಟಕಕ್ಕೆ ಶ್ರೀಮಂತ ಆರ್ಥಿಕ ಹಾಗೂ ಸಾಂಸ್ಕೃತಿಕ ಪರಂಪರೆ ಇದೆ. ಪ್ರಾಚೀನ ಕರ್ನಾಟಕದ ಸಾಕಷ್ಟು ಶಾಸನಗಳು ವ್ಯಾಪಾರಿ ಸರಕುಗಳು ಮತ್ತು ಹಣಕಾಸಿನ ವ್ಯವಹಾರಗಳ ಕುರಿತಂತೆ ಉಲ್ಲೇಖಿಸುತ್ತವೆ. ಶಾಸನಗಳು ಆಯಾಕಾಲದಲ್ಲಿ ಚಾಲ್ತಿಯಲ್ಲಿದ್ದ ವಾಣಿಜ್ಯ ಚಟುವಟಿಕೆ, ಸಾಲದ ಮೇಲಿನ ಬಡ್ಡಿದರ, ಸಮುದಾಯ ಜೀವನ ಮುಂತಾದವನ್ನು ಕುರಿತಂತೆ ವಿಪುಲ ಮಾಹಿತಿಯನ್ನು ಒದಗಿಸುತ್ತವೆ. ಅಂದಿನ ಕಾಲದಲ್ಲಿ ದೇವಾಲಯಗಳು, ತಮ್ಮ ಪರಿಸರದಲ್ಲಿ ಸ್ಥಳೀಯ ಬ್ಯಾಂಕುಗಳಂತೆ ಕಾರ್ಯನಿರ್ವಹಿಸುತ್ತಿದ್ದು, ವೈವಿಧ್ಯಮಯ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಚಟುವಟಿಕೆಗಳಿಗೆ ಕೇಂದ್ರಬಿಂದುಗಳಾಗಿದ್ದವು. ೨೦ನೇ ಶತಮಾನದಲ್ಲಿಯೂ ಆಧುನಿಕ ಬ್ಯಾಂಕಿಂಗ್ ಉದ್ಯಮದಲ್ಲಿ ಇಡೀ ದೇಶದಲ್ಲೇ ಕರ್ನಾಟಕವು ಗಮನಾರ್ಹ ಮುನ್ನಡೆಯನ್ನು ಸಾಧಿಸಿದೆ. ಕರ್ನಾಟಕದಲ್ಲಿ ಸಂಘಟಿತ ವಲಯದ ಬ್ಯಾಂಕಿಂಗ್ ಉದ್ಯಮದ ಆರಂಭವನ್ನು ಅಂದಿನ ಬೊಂಬಾಯಿ ಪ್ರೆಸಿಡೆನ್ಸಿ ಬ್ಯಾಂಕ್ (೧೮೪೦) (Presidency Bank of Bombay), ಮತ್ತು ಮದ್ರಾಸ್ ಪ್ರೆಸಿಡೆನ್ಸಿ ಬ್ಯಾಂಕ್ (Madras Presidency Bank) (೧೮೪೩)ಗಳು ತಮ್ಮ ತಮ್ಮ ಶಾಖೆಗಳನ್ನು ಕ್ರಮೇಣ ಧಾರವಾಡ (೧೮೬೩) ಮತ್ತು ಬೆಂಗಳೂರು ದಂಡುಪ್ರದೇಶ(Cantonment)ಗಳಲ್ಲಿ ಆರಂಭಿಸಿದ್ದು ಈ ಉದ್ಯಮದ ಆರಂಭದ ಹಂತವನ್ನು ಗುರುತಿಸಲು ನೆರವಾಗುತ್ತದೆ. ಆನಂತರದಲ್ಲಿ ಈ ಪ್ರೆಸಿಡೆನ್ಸಿ ಬ್ಯಾಂಕಿನ ಶಾಖೆಗಳು (ಬೆಳಗಾವಿ (೧೮೬೭), ಮಂಗಳೂರು(೧೮೬೭), ಹುಬ್ಬಳ್ಳಿ(೧೮೭೦)ಹಾಗೂ

ಕುಮಟಾಗಳಲ್ಲಿ (೧೮೭೨-೭೩)) ಆರಂಭಗೊಂಡವು. ಮದ್ರಾಸ್ ಬ್ಯಾಂಕಿನ ಮಂಗಳೂರು ಶಾಖೆಯನ್ನು ಬಂದರು ಪ್ರದೇಶದ ಸ್ಥಳೀಯ ವರ್ತಕರ ಅನುಕೂಲಕ್ಕಾಗಿ ಮತ್ತು ಬೊಂಬಾಯಿ ಬ್ಯಾಂಕಿನ ಧಾರವಾಡ ಶಾಖೆಯನ್ನು ಬೊಂಬಾಯಿ ಕರ್ನಾಟಕ ಭಾಗದ ಹತ್ತಿ ವ್ಯಾಪಾರಸ್ಥರ ಅನುಕೂಲಕ್ಕಾಗಿ ಆರಂಭಿಸಲಾಗಿತ್ತು.

ಅಸಂಘಟಿತ ವಲಯದ ಬ್ಯಾಂಕಿಂಗ್ ಉದ್ಯಮವನ್ನು ಪ್ರಮುಖವಾಗಿ ಸ್ಥಳೀಯ ಹಣಕಾಸು ಲೇವಾದೇವಿಗಾರರಾದ ಸಾಹುಕಾರರು, ಶ್ರೀಮಂತ ಜಮೀನುದಾರರು ಹಾಗೂ ವರ್ತಕರು ನಿಯಂತ್ರಿಸುತ್ತಿದ್ದರು. ಹಣಕಾಸಿನ ಲೇವಾದೇವಿ ವ್ಯವಹಾರವು ಒಂದು ಅತ್ಯಂತ ಲಾಭದಾಯಕ ವೃತ್ತಿಯಾಗಿದ್ದು, ಸಾಮಾನ್ಯವಾಗಿ ಹಣವುಳ್ಳ ಯಾವುದೇ ಜನಸಮುದಾಯ ಈ ವ್ಯವಹಾರದಲ್ಲಿ ತೊಡಗಬಹುದಾಗಿತ್ತು. ಈ ವ್ಯವಹಾರದಲ್ಲಿ ನಿರತರಾಗಿದ್ದ ಮಾರವಾಡಿಗಳು, ಗುಜರಾತಿಗಳು, ಜೈನರು, ಮಹಾಜನರು, ಚೆಟ್ಟಿಯಾರ್ ಮತ್ತು ಉತ್ತರದ ಮುಲ್ತಾನಿ ಬ್ಯಾಂಕರುಗಳು ಕರ್ನಾಟಕದ ಬೇರೆ ಬೇರೆ ವಾಣಿಜ್ಯ ಕೇಂದ್ರಗಳಲ್ಲಿ ಬಂದು ನೆಲಸಿ ಈ ವ್ಯವಹಾರದಲ್ಲಿ ತಮ್ಮನ್ನು ವಿಶೇಷವಾಗಿ ತೊಡಗಿಸಿಕೊಂಡರು. ಹೆಚ್ಚಾಗಿ, ಈ ಜನರೇ ಇಂದಿಗೂ ಲೇವಾ-ದೇವಿ ವ್ಯವಹಾರದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದು ಉಲ್ಲೇಖಾರ್ಹ.

ಬ್ರಿಟಿಷರ ಆಳ್ವಿಕೆಯಲ್ಲೂ ಬೆಂಗಳೂರಿನ ದಂಡು ಪ್ರದೇಶದಲ್ಲಿ ಸ್ಥಳೀಯರೊಂದಿಗೆ, ಯುರೋಪಿಯನ್ ಮೂಲದ ಹಣಕಾಸು ಲೇವಾದೇವಿದಾರರು (ಸೈನ್ಯಾಧಿಕಾರಿಗಳ ವಿಧವಾ ಪತ್ನಿಯರೂ ಸೇರಿದಂತೆ) ಈ ವ್ಯವಹಾರದಲ್ಲಿ ವ್ಯಾಪಕವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಈ ವ್ಯವಹಾರಗಳಲ್ಲಿ ಉಂಟಾಗಬಹುದಾದ ವ್ಯಾಜ್ಯಗಳನ್ನು ನಿರ್ಣಯಿಸಲು ಸಹಾಯಕವಾಗುವಂತೆ ವಿಶೇಷವಾದ ಸಿವಿಲ್ ನ್ಯಾಯಾಲಯಗಳನ್ನು (Special Civil Courts) ಲಘು ವ್ಯಾಜ್ಯ ನ್ಯಾಯಾಲಯ (Small Causes Court) ಎಂಬ ಹೆಸರಿನೊಂದಿಗೆ ಆರಂಭಿಸಲಾಯಿತು. ಈ ಕೋರ್ಟು ರೂ.೫೦೦ ವರೆಗಿನ ಮೌಲ್ಯದ ವ್ಯವಹಾರ ತೀರ್ಮಾನಕ್ಕೆ ಮಾತ್ರ ಸೀಮಿತವಾಗಿತ್ತೆಂದು ತಿಳಿದು ಬರುತ್ತದೆ.

ಸ್ವಾತಂತ್ರ್ಯಪೂರ್ವ ದಶಕಗಳಲ್ಲಿ ಬ್ಯಾಂಕಿಂಗ್ ಉದ್ಯಮವನ್ನು ಆರಂಭಿಸಲು ಇಂದಿನಂತೆ ಯಾವುದೇ ಬಿಗಿಯಾದ ಕಾನೂನಿನ ಕಟ್ಟಳೆ, ನಿಯಂತ್ರಣ ಮುಂತಾದವು ಇಲ್ಲದೇ ಇದ್ದುದರಿಂದ ಈ ಉದ್ಯಮದ ಆರಂಭ ಸರಳವೂ ವ್ಯಾಪಕವೂ ಆಗಿತ್ತು. (ನಿಯಂತ್ರಣ ಕಾನೂನು ಇತ್ಯಾದಿ ಕ್ರಮಗಳನ್ನು ಅತೀ ತಡವಾಗಿ ಸ್ವಾತಂತ್ರ್ಯ ನಂತರದಲ್ಲಿ (೧೯೪೯) ತರಲಾಯಿತು). ಇದರಿಂದಾಗಿ ಅಂದಿನ ದಿನಗಳಲ್ಲಿ ಮಿತ ಬಂಡವಾಳ ಹೊಂದಿದ್ದ, ಹಣಕಾಸಿನ ವ್ಯವಹಾರ ನಿರ್ವಹಣಾ ಅನುಭವವಿಲ್ಲದ ಚಿಕ್ಕ ಚಿಕ್ಕ ಬ್ಯಾಂಕಿಂಗ್ ಕಂಪನಿಗಳು ಸರ್ವೆಸಾಮಾನ್ಯವಾಗಿದ್ದವು. ಅರೆನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿಯೂ ಬ್ಯಾಂಕಿಂಗ್ ಕಂಪನಿಗಳನ್ನು ಹುಟ್ಟು ಹಾಕಲಾಯಿತು. ಇದರಿಂದ ಬ್ಯಾಂಕಿಂಗ್ ಕಂಪನಿಗಳು ವಿಪುಲವಾಗಿ ನಾಯಿ ಕೊಡೆಗಳಂತೆ ಬೆಳೆದು ಬಂದವು. ಹೀಗೆ ರಾಜ್ಯದಲ್ಲಿ ಆರಂಭಗೊಂಡ ಬ್ಯಾಂಕಿಂಗ್ ಕಂಪನಿಗಳಲ್ಲಿ ಸುಮಾರು ಅರ್ಧದಷ್ಟು ಕಂಪನಿಗಳು ೧೯೩೦-೪೦ರ ದಶಕದಲ್ಲಿ ನೊಂದಾಯಿಸಲ್ಪಟ್ಟವು.

ಸ್ವದೇಶಿ ಚಳವಳಿಯ ಆರಂಭವು ವಿಶೇಷವಾಗಿ ಸ್ಥಳೀಯ ವ್ಯಾಪಾರಸ್ಥರಿಗೆ ಬ್ಯಾಂಕಿಂಗ್ ಉದ್ಯಮವನ್ನು ಆರಂಭಿಸಲು ಪ್ರೇರಕವಾಯಿತು. ಆದರೆ ಆರಂಭಗೊಂಡ ಬಹುಪಾಲು ಬ್ಯಾಂಕುಗಳು ದೀರ್ಘಕಾಲ ಬದುಕಿ ಉಳಿಯಲು ಸಾಧ್ಯವಾಗಲಿಲ್ಲ. ಅಂದಿನ ದಿನಗಳಲ್ಲಿ ಗ್ರಾಹಕರನ್ನು ಅವರವರ ಧರ್ಮ, ಜಾತಿ, ಪಂಗಡ ಇತ್ಯಾದಿಗಳ ಹೆಸರಿನಲ್ಲಿ ಭಾವನಾತ್ಮಕವಾಗಿ ಆಕರ್ಷಿಸಲು ಸಹಾಯವಾಗುವಂತಹ ಆಕರ್ಷಕ ಹೆಸರುಗಳಿಂದ ಬ್ಯಾಂಕಿಂಗ್ ಕಂಪನಿಗಳನ್ನು ಆರಂಭಿಸಲಾಯಿತು. ಅನೇಕ ಸಂದರ್ಭಗಳಲ್ಲಿ ಈ ರೀತಿ ಭಾವನಾತ್ಮಕ ಬೆಸುಗೆ ಸ್ಥಳೀಯ ಸಾಮಾಜಿಕ ಅಭಿಮಾನ, ವಾಣಿಜ್ಯ ಅಭಿಮಾನವಾಗಿ ಬದಲಾವಣೆಗೊಂಡು ಆಯಾ ಸಂಸ್ಥೆಗಳ ತೀವ್ರ ಆರ್ಥಿಕ ಪ್ರಗತಿಗೆ, ಸಾಮಾಜಿಕ ಮುನ್ನಡೆಗೆ ಕಾರಣವಾದ ಸಂದರ್ಭಗಳೂ ಉಂಟು. ಈ

ಒಂದು ವಿಶೇಷ ಪ್ರವೃತ್ತಿಯು ಕರ್ನಾಟಕದಲ್ಲಿ ಆಧುನಿಕ ಬ್ಯಾಂಕಿಂಗ್ ಉದ್ಯಮಕ್ಕೆ ಸೂಕ್ತ ವೇದಿಕೆಯಾಗಿ ಪರಿಣಮಿಸಿತೆಂದೇ ಅರ್ಥೈಸಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಪ್ರಾರಂಭಿಕ ಹಂತದ ಬ್ಯಾಂಕಿಂಗ್ ಉದ್ಯಮದಲ್ಲಿ ಈ ಅಂಶ ಕಂಡು ಬರುತ್ತದೆ. ಆಧುನಿಕ ಬ್ಯಾಂಕಿಂಗ್ ಉದ್ಯಮಕ್ಕೆ ಅವಿಭಜಿತ–ದಕ್ಷಿಣ ಕನ್ನಡ ಜಿಲ್ಲೆಯ ಕೊಡುಗೆ ವಿಶೇಷವಾದ್ದು, ಅಪಾರವಾದ್ದು. ಬ್ಯಾಂಕು ಶಾಖೆಗಳನ್ನು ಆರಂಭಿಸುವ ಕ್ರಿಯೆ ಈ ಜಿಲ್ಲೆಯಲ್ಲಿ ೧೯೨೩ರಷ್ಟು ಹಿಂದೆಯೇ ಆರಂಭವಾಯಿತು. ನಾಲ್ಕು ದಶಕಗಳ ಅವಧಿಯಲ್ಲಿ (೧೯೦೬–೧೯೪೫) ಈ ಜಿಲ್ಲೆಯಲ್ಲಿ ೨೨ ಬ್ಯಾಂಕಿಂಗ್ ಕಂಪನಿಗಳನ್ನು ಹುಟ್ಟುಹಾಕಿ ಅವುಗಳಿಗೆ ಸೂಕ್ತ ಪಾಲನೆ ಮತ್ತು ಪೋಷಣೆ ನೀಡಲಾಯಿತು. ಅಂತೆಯೇ ಈ ಜಿಲ್ಲೆಯನ್ನು ಬ್ಯಾಂಕಿಂಗ್ ಉದ್ಯಮದ ತೊಟ್ಟಿಲು ಎಂದು ಹೇಳಲಾಗುತ್ತದೆ. ಏಕೀಕರಣಗೊಂಡ ನಂತರ, ಕರ್ನಾಟಕದ ವಿವಿಧ ಭಾಗಗಳಲ್ಲಿಯೂ ಆಯಾ ಪ್ರದೇಶಗಳಲ್ಲಿನ ಸ್ಥಳೀಯ ಬೇಡಿಕೆ, ಆರ್ಥಿಕ ಬೆಳವಣಿಗೆಯ ಸಾಮರ್ಥ್ಯ, ನಿರ್ವಹಣಾ ಪರಿಣತಿ, ಮುಂತಾದವುಗಳನ್ನು ಆಧರಿಸಿ ಬೇರೆ ಬೇರೆ ಕಾಲಘಟ್ಟದಲ್ಲಿ ಅತೀ ವಿರಳವಾಗಿ ಬ್ಯಾಂಕಿಂಗ್ ಚಟುವಟಿಕೆಗಳು ಆರಂಭಗೊಂಡವು. ಮೈಸೂರು ಸಂಸ್ಥಾನದಲ್ಲಿ ಕಮಿಷನರ್ ಆಳ್ವಿಕೆಯ ಕಾಲ (೧೮೩೧–೧೮೮೧) ಅತ್ಯಂತ ಪ್ರಮುಖವಾದುದು. ಈ ಕಾಲದಲ್ಲಿ ಬ್ರಿಟಿಷ್ ಮಾದರಿಯ ಆಡಳಿತ ಕ್ರಮವನ್ನು ಅನುಸರಿಸುವ ಮೂಲಕ ಬ್ಯಾಂಕಿಂಗ್ ವಲಯವೂ ಸೇರಿದಂತೆ ಎಲ್ಲಾ ವಲಯಗಳಲ್ಲೂ ಆಧುನೀಕರಣವನ್ನು ವ್ಯಾಪಕವಾಗಿ ಸಂಸ್ಥಾನದಲ್ಲಿ ರೂಢಿಗೆ ತರಲಾಯಿತು. ೧೮೯ ರಲ್ಲಿ ಬೆಂಗಳೂರಿನಲ್ಲಿ ದಂಡು ಪ್ರದೇಶ ಸ್ಥಾಪನೆ, ಮೈಸೂರಿನಿಂದ ಬೆಂಗಳೂರಿಗೆ ೧೮೩೧ರಲ್ಲಿ ರಾಜ್ಯದ ಆಡಳಿತ ವ್ಯವಸ್ಥೆಯ (ಸಚಿವಾಲಯ ಕಛೇರಿ) ವರ್ಗಾವಣೆ ಮುಂತಾದ ಕ್ರಮಗಳಿಂದಾಗಿ ಬೆಂಗಳೂರಿನಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಚಟುವಟಿಕೆಗಳಿಗೆ ಹೆಚ್ಚಿನ ಉತ್ತೇಜನ ದೊರೆಯುವಂತಾಯಿತು. ಈ ಉತ್ತೇಜನ ಭಾಗಶ: ಬ್ಯಾಂಕಿಂಗ್ ವಲಯದಿಂದಲೂ ದೊರೆಯುವಂತಾಯಿತು.

ಮೈಸೂರು ಸಂಸ್ಥಾನದಲ್ಲಿ ಆರಂಭಿಸಲ್ಪಟ್ಟ ಕೂಡು ಬಂಡವಾಳ ಸಂಸ್ಥೆಗಳಲ್ಲಿ (Joint Stock Company) ಬೆಂಗಳೂರಿನಿಂದ ಮೂಡಿಬಂದ 'ಬೆಂಗಳೂರು ಬ್ಯಾಂಕ್ (ಲಿ.,)' ಮತ್ತು 'ಮೈಸೂರು ಬ್ಯಾಂಕ್ ಕಾರ್ಪೋರೇಷನ್(ಲಿ.,)' ಎಂಬ ಎರಡು ಹಣಕಾಸು ಸಂಸ್ಥೆಗಳನ್ನು ೧೮೬೮ರಲ್ಲಿ ನೊಂದಾಯಿಸಲಾಯಿತು. ಈ ಹಣಕಾಸು ಸಂಸ್ಥೆಗಳು ಕ್ರಮವಾಗಿ ಏಳು ಲಕ್ಷ, ಮತ್ತು ಎರಡು ಲಕ್ಷ ರೂಪಾಯಿಗಳ ಷೇರುಬಂಡವಾಳವನ್ನು ಹೊಂದಿದ್ದವು. ಈ ಮೊದಲೇ ತಿಳಿಸಿದಂತೆ ಬೆಂಗಳೂರು ನಗರ ಪ್ರದೇಶ ಮತ್ತು ದಂಡುಪ್ರದೇಶಗಳು ಅಭಿವೃದ್ಧಿಗೆ ಪೂರಕ ಅಂಶಗಳಾದ ಉತ್ತಮ ಮೂಲಭೂತ ಸೌಕರ್ಯ ಮತ್ತು ಸಾಮರ್ಥ್ಯಗಳನ್ನು ಹೊಂದಿದ್ದರಿಂದ ಸಂಘಟಿತ ಮತ್ತು ಅಸಂಘಟಿತ ವಲಯಗಳೆರಡರಲ್ಲೂ ಬ್ಯಾಂಕಿಂಗ್ ಸಂಸ್ಥೆಗಳು ಬಹು ವ್ಯಾಪಕ ಪ್ರಮಾಣದಲ್ಲಿ ಮೂಡಿಬರಲು ಸಹಾಯಕವಾಯಿತು. ಬೆಂಗಳೂರು ನಗರ ವ್ಯಾಪ್ತಿಯಲ್ಲಿ ೧೮೬೮–೧೮೭೬ರ ಮಧ್ಯದ ಅವಧಿಗಾಗಲೇ, ಸುಮಾರು ೨೪ ಬ್ಯಾಂಕಿಂಗ್ ಕಂಪನಿಗಳು ಕಾರ್ಯನಿರ್ವಹಿಸುತ್ತಿದ್ದ ಬಗ್ಗೆ ಮಾಹಿತಿ ಲಭ್ಯವಿದೆ. ಮುಂದಿನ ಕೆಲವು ದಶಕಗಳಲ್ಲಿ ಅಂದರೆ ೧೮೯೦–೧೯೪೯ರ ಅವಧಿಯಲ್ಲಿ ಸುಮಾರು ೧೨ ಬ್ಯಾಂಕಿಂಗ್ ಕಂಪನಿಗಳು ಆರಂಭವಾದರೂ ಎಲ್ಲವೂ ಉಳಿದು ಬರಲಿಲ್ಲ. ಬೆಂಗಳೂರು ಮೂಲದ ಬ್ಯಾಂಕುಗಳಲ್ಲಿ, ೧೮೯೦ರಲ್ಲಿ ಆರಂಭಗೊಂಡ ಬೆಂಗಳೂರು ಯೂನಿಯನ್ ಬ್ಯಾಂಕ್, ಅತಿ ಹೆಚ್ಚಿನ ಅವಧಿಯ ಅಂದರೆ ೫೦ ವರ್ಷಗಳ ಸುದೀರ್ಘ ಸೇವೆಯ ನಂತರ ೧೯೪೦ರಲ್ಲಿ ಸಮಾಪನಗೊಂಡಿತು (Liquidated). ೧೯೨೬ರಲ್ಲಿ ಆರಂಭಗೊಂಡ 'ದೇವಾಂಗ ಬ್ಯಾಂಕ್' ೧೯೬೩ರಲ್ಲಿ ವಿಜಯಾ ಬ್ಯಾಂಕಿನೊಂದಿಗೆ ವಿಲೀನವಾಯಿತು. ಆದರೆ ೧೯೧೩ ರಲ್ಲಿ ಆರಂಭಗೊಂಡ 'ಮೈಸೂರು ಬ್ಯಾಂಕ್' ಮತ್ತು ೧೯೩೦ರಲ್ಲಿ ಆರಂಭಗೊಂಡ 'ವೈಶ್ಯ ಬ್ಯಾಂಕ್' ಇಂದಿಗೂ ಅಸ್ತಿತ್ವದಲ್ಲಿವೆ. ನಂತರದ ದಿನಗಳಲ್ಲಿ 'ಮೈಸೂರು ಬ್ಯಾಂಕ್', 'ಸ್ಟೇಟ್ ಬ್ಯಾಂಕ್ ಆಫ್ ಮೈಸೂರು' ಎಂದು ಪುನರ್ ನಾಮಕರಣಗೊಂಡಿತು.

ಸಂಸ್ಥಾನದ ಅಂದಿನ ರಾಜಧಾನಿ ಪಟ್ಟಣ ಮೈಸೂರು ನಗರವೂ ಬ್ಯಾಂಕಿಂಗ್ ಕಂಪನಿಗಳನ್ನು ಪ್ರಾಯೋಜಿಸುವಲ್ಲಿ ಯಾವುದೇ ರೀತಿಯಲ್ಲೂ ಹಿಂದೆ ಬೀಳಲಿಲ್ಲ. ೧೮೭೪ರಲ್ಲಿ (ಬೆಂಗಳೂರಿನಲ್ಲಿ

ಆರಂಭಗೊಂಡ ಆರು ವರ್ಷಗಳ ನಂತರ) 'ರಾಜಧಾನಿ ಬ್ಯಾಂಕ್' ಮತ್ತು 'ಟೌನ್ ಬ್ಯಾಂಕ್ ಆಫ್ ಮೈಸೂರು' (Town Bank of Mysore) ಎಂಬ ಎರಡು ಬ್ಯಾಂಕಿಂಗ್ ಕಂಪನಿಗಳನ್ನು ಮೈಸೂರಿನಲ್ಲಿ ಆರಂಭಿಸಲಾಯಿತು. ಇವು ೧೯೧೩ರ ನಂತರ ಮುಂದುವರೆದಂತೆ ತೋರುವುದಿಲ್ಲ. ಇದಾದ ಒಂದು ದಶಕದ ನಂತರ ೧೮೮೫ರಲ್ಲಿ 'ನಂಜನಗೂಡು ಶ್ರೀಕಂಠೇಶ್ವರಸ್ವಾಮಿ ಬ್ಯಾಂಕ್' ಅನ್ನು ಪ್ರಾಯೋಜಿಸಲಾಯಿತು. ಈ ಸಂಸ್ಥೆಯು ೮೦ ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿದ ನಂತರ, ೧೯೬೫ರಲ್ಲಿ ಅದರ ಪರವಾನಿಗೆಯನ್ನು ನಿರಾಕರಿಸಲಾಯಿತು. ಸುಮಾರು ಎರಡೂವರೆ ದಶಕಗಳ ಅವಧಿಯಲ್ಲಿ (೧೮೮೪-೧೯೦೮), ಮೈಸೂರಿನಲ್ಲಿ ೧೭ ಕೂಡು ಬಂಡವಾಳ ಸಂಸ್ಥೆಗಳು ಆರಂಭಿಸಲ್ಪಟ್ಟವು. ಇವು ಬ್ಯಾಂಕಿಂಗ್ ಮತ್ತು ವ್ಯಾಪಾರ ವಹಿವಾಟು ಎರಡೂ ವ್ಯವಹಾರಗಳನ್ನು ನಿರ್ವಹಿಸುತ್ತಿದ್ದವು. ಹಳೇ ಮೈಸೂರು ರಾಜ್ಯದ ಅತ್ಯಂತ ಹಳೆಯ ಬ್ಯಾಂಕುಗಳಲ್ಲಿ ೧೮೭೦ರಲ್ಲಿ ಚನ್ನಗಿರಿ ರಾಘವೇಂದ್ರರಾವ್ ಅವರಿಂದ ಆರಂಭಗೊಂಡ 'ಚಿತ್ರದುರ್ಗ ಸೇವಿಂಗ್ಸ್ ಬ್ಯಾಂಕು' ಉಲ್ಲೇಖನೀಯ. ಇದು ಸುಮಾರು ೯೬ ವರ್ಷಗಳ ಸುದೀರ್ಘ ಸೇವೆಯ ನಂತರ ೧೯೬೬ರಲ್ಲಿ ಕರ್ನಾಟಕ ಬ್ಯಾಂಕಿನೊಂದಿಗೆ ವಿಲೀನವಾಯಿತು.

**ವ್ಯವಸಾಯ ಬ್ಯಾಂಕು:** ಹೊಸ ತಳಿಯ ಈ ಬ್ಯಾಂಕುಗಳನ್ನು ಮೈಸೂರು ಸಂಸ್ಥಾನವು ೧೮೯೪ರಲ್ಲಿ "ವ್ಯವಸಾಯ ಬ್ಯಾಂಕು" ಎಂಬ ಹೆಸರಿನಲ್ಲಿ ಪ್ರಾಯೋಜಿಸಿತು. ಈ ಬ್ಯಾಂಕುಗಳು, ರಚನೆಯಲ್ಲಿ ಕೂಡು ಬಂಡವಾಳ ಸಂಸ್ಥೆಗಳ ಸೀಮಿತ ಗ್ಯಾರಂಟಿ (Limited guarantee) ಹೊಣೆಗಾರಿಕೆ ಮೇಲೆ ಆರಂಭಗೊಂಡಿದ್ದರೂ ಇವುಗಳ ಕಾರ್ಯವಿಧಾನ ಮತ್ತು ಮೂಲ ಉದ್ದೇಶ ಸಹಕಾರಿ ತತ್ವಗಳಿಂದ ಕೂಡಿತ್ತು ಎಂಬುದು ಗಮನಾರ್ಹ. ಈ ಬ್ಯಾಂಕುಗಳ ಮುಖ್ಯ ಉದ್ದೇಶ ಬಡರೈತರಿಗೆ ಕಡಿಮೆ ಬಡ್ಡಿಯಲ್ಲಿ ವ್ಯವಸಾಯ ಸಾಲವನ್ನು ಒದಗಿಸುವುದರ ಜೊತೆಗೆ ಸಾಹುಕಾರರ ಅತಿಯಾದ ಬಡ್ಡಿಯ ಹೊರೆಯಿಂದ, ಶೋಷಣೆಯುಕ್ತ ಸಂಕಷ್ಟದಿಂದ ಬಡರೈತರನ್ನು ದೂರಮಾಡುವುದೇ ಆಗಿತ್ತು. ೧೯೦೧ರ ಸುಮಾರಿಗೆ ಅಂದಿನ ಮೈಸೂರು ರಾಜ್ಯದಲ್ಲೂ ಇಂತಹ ೬೪ ಬ್ಯಾಂಕುಗಳು ಇದ್ದವೆಂದು ತಿಳಿದು ಬರುತ್ತದೆ. ಆದರೆ, ಈ ಬ್ಯಾಂಕುಗಳು ಕಡಿಮೆ ಬಡ್ಡಿಯಲ್ಲಿ ನೀಡುತ್ತಿದ್ದ ಸುಲಭ ಸಾಲ ವ್ಯವಸ್ಥೆಯನ್ನು ದೊಡ್ಡ ಹಿಡುವಳಿದಾರರು ದುರುಪಯೋಗ ಪಡಿಸಿಕೊಂಡಿದ್ದರಿಂದ ಇಂತಹ ಅನೇಕ ಬ್ಯಾಂಕುಗಳು ನಷ್ಟ ಅನುಭವಿಸುವ ಮೂಲಕ ಸಮಾಪನಗೊಳ್ಳಬೇಕಾಯಿತು. ತತ್ಪರಿಣಾಮವಾಗಿ ೧೯೧೭ರ ಸುಮಾರಿಗೆ ಈ ಎಲ್ಲಾ ಬ್ಯಾಂಕುಗಳು ಮುಚ್ಚಲ್ಪಟ್ಟವು. ಆದರೂ ವ್ಯವಸಾಯ ಬ್ಯಾಂಕುಗಳ ಸ್ಥಾಪನೆಯು ವಿಶೇಷವಾಗಿ ಗ್ರಾಮೀಣರ ಹಣಕಾಸು ಅಭ್ಯುದಯಕ್ಕೆ ಸಂಬಂಧಿಸಿದಂತೆ ಮಾಡಿದ ಒಂದು ಅಪೂರ್ವ ಪ್ರಯೋಗವಾಗಿತ್ತು. ಆದರೆ ಈ ಸಂಸ್ಥೆಗಳು ಅವಸಾನ ಹೊಂದಲು ಸರ್ಕಾರದ ಸೂಕ್ತವಾದ ನಿಯಂತ್ರಣ ಮತ್ತು ಮೇಲ್ವಿಚಾರಣೆಗಳಿಲ್ಲದೇ ಇದ್ದುದು ಮತ್ತು ಈ ಸಂಸ್ಥೆಗಳಿಗೆ ಸರ್ಕಾರ ನೀಡಿದ ಉದಾರ ಹಣಕಾಸು ನೆರವಿನ ದುರುಪಯೋಗ ಮುಂತಾದವು ಪ್ರಮುಖ ಕಾರಣಗಳಾಗಿದ್ದವು.

ಹಳೆಯ ಮುಂಬಯಿ ಕರ್ನಾಟಕ ಪ್ರದೇಶ ಭಾಗಗಳಲ್ಲೂ ಸ್ಥಳೀಯವಾಗಿ ಪಟ್ಟಣ ಸಹಕಾರ ಬ್ಯಾಂಕುಗಳು ವ್ಯಾಪಕವಾಗಿದ್ದು, ಹೆಚ್ಚು ಪ್ರಭಾವಶಾಲಿಯಾಗಿದ್ದರಿಂದ ಸ್ಥಳೀಯ ವರ್ತಕರಿಂದ ವಾಣಿಜ್ಯ ಬ್ಯಾಂಕುಗಳನ್ನು ಆರಂಭಿಸುವ ಪ್ರಯತ್ನಗಳು ವಿರಳವಾಗಿ ಮತ್ತು ಸೀಮಿತವಾಗಿ ನಡೆದವು. ಈ ಭಾಗದಲ್ಲಿ ಆರಂಭಗೊಂಡ ಆರಂಭಿಕ ಪ್ರಯತ್ನಗಳೆಂದರೆ 'ಯೂನಿಯನ್ ಬ್ಯಾಂಕ್ ಆಫ್ ಬಿಜಾಪುರ ಮತ್ತು ಸೊಲ್ಲಾಪುರ' (೧೯೦೮), 'ಬಾಗಲಕೋಟ್ ಕಮರ್ಷಿಯಲ್ ಬ್ಯಾಂಕ್' (೧೯೨೨), 'ಶ್ರೀ ಲಕ್ಷ್ಮೀ ಬ್ಯಾಂಕ್, ಹಾನಗಲ್ಲ' (೧೯೨೯), (ಇಂದಿನ ಹಾವೇರಿ ಜಿಲ್ಲೆ), 'ಹುಬ್ಬಿ (ಹುಬ್ಬಳ್ಳಿ) ಸಿಟಿ ಬ್ಯಾಂಕ್' (೧೯೩೦), 'ಬೆಳಗಾಂ ಬ್ಯಾಂಕ್ ಆಫ್ ಬೆಳಗಾಂವ್' (೧೯೩೦) ಮತ್ತು 'ಬ್ಯಾಂಕ್ ಆಫ್ ಸಿಟಿಜನ್ಸ್ ಬೆಳಗಾಂವ್' (೧೯೩೯). ಉತ್ತರ ಕನ್ನಡ ಜಿಲ್ಲೆಯಲ್ಲಿ ಆರಂಭಗೊಂಡ ಹಳೆಯ (ಪ್ರಥಮ) ವಾಣಿಜ್ಯ ಬ್ಯಾಂಕುಗಳಲ್ಲಿ ಕಡಲ ತೀರದ ಕಾರವಾರದಲ್ಲಿ ೧೯೪೦ ರಲ್ಲಿ ಆರಂಭಗೊಂಡ 'ಬ್ಯಾಂಕ್ ಆಫ್ ರೂರಲ್ ಇಂಡಿಯಾ' ಒಂದಾಗಿತ್ತು. ಮುಂಬಯಿ ಮತ್ತು ಮಂಗಳೂರು

ಮೂಲದ ಪ್ರಮುಖ ವಾಣಿಜ್ಯ ಬ್ಯಾಂಕುಗಳೆಂದರೆ ವಿಶೇಷವಾಗಿ ಕೆನರಾ, ಸಿಂಡಿಕೇಟ್, ಕಾರ್ಪೊರೇಷನ್, ಯೂನಿಯನ್ ಬ್ಯಾಂಕ್, ಎಸ್.ಬಿ.ಐ, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಮುಂತಾದವು ೧೯೩೦–೧೯೪೦ರ ಅವಧಿಯಲ್ಲಿ ಬೊಂಬಾಯಿ ಕರ್ನಾಟಕದ ವಾಣಿಜ್ಯ ಕೇಂದ್ರಗಳಲ್ಲಿ ತಮ್ಮ ಬ್ಯಾಂಕುಶಾಖೆಗಳನ್ನು ಆರಂಭಿಸಿದ್ದವು. ಇನ್ನು ಹಿಂದಿನ ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ, ಹೈದರಾಬಾದ (ನೈಜಾಮ್) ಸರ್ಕಾರದ ಒಡೆತನದ ಹೈದರಾಬಾದ ಬ್ಯಾಂಕ್ ೧೯೪೧ರಲ್ಲಿ ಆರಂಭವಾಗುವವವರೆಗೆ ಸ್ಥಳೀಯವಾಗಿ ಬ್ಯಾಂಕುಗಳನ್ನು ಪ್ರಾಯೋಜಿಸುವ ಯಾವುದೇ ಗಮನಾರ್ಹ ಪ್ರಯತ್ನಗಳು ನಡೆಯಲಿಲ್ಲ. ಆದಾಗ್ಯೂ ಗುಲಬರ್ಗಾ ಜಿಲ್ಲೆಯಲ್ಲಿ 'ಸರಸ್ವತಿ ಬ್ಯಾಂಕ್' (೧೯೨೨), 'ಗುಲಬರ್ಗಾ ಬ್ಯಾಂಕಿಂಗ್ ಕಂಪನಿ' (೧೯೩೦) 'ಕಮರ್ಷಿಯಲ್ ಬ್ಯಾಂಕಿಂಗ್ ಕಂಪನಿ ಯಾದಗಿರಿ' (೧೯೩೮), ಮುಂತಾದ ವಾಣಿಜ್ಯ ಬ್ಯಾಂಕಿಂಗ್ ಸಂಸ್ಥೆಗಳು ಆರಂಭಗೊಂಡವು. ರಾಯಚೂರು ಜಿಲ್ಲೆಯಲ್ಲಿ 'ಶ್ರೀ ಶಾರದಾ ಬ್ಯಾಂಕಿಂಗ್ ಕಂ' (೧೯೩೭) ಮತ್ತು 'ಉಸ್ಮಾನಿಯ ಅಜೀಜ್ ಬ್ಯಾಂಕ್' (೧೯೩೩)ಗಳು ಆರಂಭಗೊಂಡರೆ ಬೀದರ್ ಜಿಲ್ಲೆಯಲ್ಲಿ ೧೯೪೬ ರವರೆಗೆ ಯಾವುದೇ ವಾಣಿಜ್ಯ ಬ್ಯಾಂಕುಗಳು ಇರಲಿಲ್ಲವೆಂದು ತಿಳಿದುಬರುತ್ತದೆ. ಇನ್ನು ಹಳೆಯ ಮದ್ರಾಸ್ ಪ್ರಾಂತ್ಯಕ್ಕೆ ಒಳಪಟ್ಟ ಪ್ರದೇಶಗಳಾಗಿದ್ದ ಇಂದಿನ ದಕ್ಷಿಣ ಕನ್ನಡ, ಉಡುಪಿ, ಕೊಡಗು, ಬಳ್ಳಾರಿ ಜಿಲ್ಲೆಗಳು ಮತ್ತು ಇಂದಿನ ಚಾಮರಾಜನಗರ ಜಿಲ್ಲೆಯ ಭಾಗವಾಗಿರುವ ಕೊಳ್ಳೇಗಾಲ ತಾಲೂಕು ಪ್ರದೇಶದಲ್ಲಿ ಪೂರ್ಣ ಪ್ರಮಾಣದ ವಾಣಿಜ್ಯ ಬ್ಯಾಂಕುಗಳು ವ್ಯಾಪಿಸಿದ್ದು ಕಾರ್ಯನಿರ್ವಹಿಸುತ್ತಿದ್ದವು.

## ಬ್ಯಾಂಕಿಂಗ್ ಉದ್ಯಮದ ಅಭಿವೃದ್ಧಿ

ದೇಶದ ಬ್ಯಾಂಕಿಂಗ್ ಉದ್ಯಮದ ಬೆಳವಣಿಗೆಯಲ್ಲಿ ಕಂಡು ಬರುತ್ತಿರುವ ತೀವ್ರತರವೂ ಗಮನಾರ್ಹವೂ ಆದ ಬದಲಾವಣೆಗಳನ್ನು ವಿಶೇಷವಾಗಿ ರಾಷ್ಟ್ರೀಕರಣ ನಂತರದ (೧೯೬೯ ಮತ್ತು ೧೯೮೦) ವರ್ಷಗಳಲ್ಲಿ ಗಮನಿಸಬಹುದು, ರಾಷ್ಟ್ರೀಕರಣಗೊಂಡ ದೇಶದ ೨೦ ಪ್ರಮುಖ ಬ್ಯಾಂಕುಗಳ ಪೈಕಿ ನಾಲ್ಕು ಸಂಸ್ಥೆಗಳು ಕರ್ನಾಟಕ ಮೂಲದವು. ಅವುಗಳಲ್ಲಿ ೧೯೬೯ರಲ್ಲಿ ರಾಷ್ಟ್ರೀಕರಣಗೊಂಡ ಕೆನರಾ ಬ್ಯಾಂಕ್ (೧೯೦೬), ಹಾಗೂ ೧೯೮೦ರಲ್ಲಿ ರಾಷ್ಟ್ರೀಕರಣಗೊಂಡ ವಿಜಯಾ ಬ್ಯಾಂಕ್ (೧೯೩೦) ಮಂಗಳೂರು ಮೂಲದವಾದರೆ, ೧೯೬೯ರಲ್ಲಿ ರಾಷ್ಟ್ರೀಕರಣಗೊಂಡ ಸಿಂಡಿಕೇಟ್ ಬ್ಯಾಂಕ್ (೧೯೨೫) ಹಾಗೂ ೧೯೮೦ರಲ್ಲಿ ರಾಷ್ಟ್ರೀಕರಣಗೊಂಡ ಕಾರ್ಪೊರೇಷನ್ ಬ್ಯಾಂಕ್ (೧೯೦೬) ಉಡುಪಿ ಮೂಲದವು. ರಾಜ್ಯದ ಖಾಸಗಿ ವಲಯದ ಪ್ರಮುಖ ಬ್ಯಾಂಕುಗಳಲ್ಲಿ ಬೆಂಗಳೂರು ಮೂಲದ ವೈಶ್ಯ ಬ್ಯಾಂಕ್ (೧೯೩೦) ಮತ್ತು ಮಂಗಳೂರು ಮೂಲದ ಕರ್ನಾಟಕ ಬ್ಯಾಂಕ್ (೧೯೩೦) ಗಮನಾರ್ಹವಾದವು. ಈ ಸಂಸ್ಥೆಗಳ ಶಾಖೆಗಳು ರಾಜ್ಯದ ಹೊರಗೂ ಸಹ ವ್ಯಾಪಿಸಿವೆ. ರಾಜ್ಯದಲ್ಲಿ ವ್ಯಾಪಕವಾಗಿ ವೃದ್ಧಿಸುತ್ತಿರುವ ಬ್ಯಾಂಕಿಂಗ್ ಉದ್ಯಮವನ್ನು ಪರಿಗಣಿಸಿ ಭಾರತೀಯ ರಿಸರ್ವ್ ಬ್ಯಾಂಕ್ ೧೯೫೩ರಲ್ಲಿ ತನ್ನ ಒಂದು ಶಾಖೆಯನ್ನು ಬೆಂಗಳೂರಿನಲ್ಲಿ ಆರಂಭಿಸಿದ್ದು ಮಹತ್ವದ ಬೆಳವಣಿಗೆಯಾಗಿತ್ತು.



ಸ್ಟೇಟ್ ಬ್ಯಾಂಕ್ ಆಫ್ ಮೈಸೂರು

ರಾಷ್ಟ್ರೀಕರಣ ನಂತರದ ದಿನಗಳಲ್ಲಿ ಬ್ಯಾಂಕಿಂಗ್ ಉದ್ಯಮದ ಪರಿಕಲ್ಪನೆಯಲ್ಲಿ, ಕಾರ್ಯವಿಧಾನಗಳಲ್ಲಿ ಗಮನಾರ್ಹ ಬದಲಾವಣೆಗಳಾಗಿರುವುದನ್ನು ಕಾಣಬಹುದು. ಹಿಂದೆ ರಾಷ್ಟ್ರೀಕರಣ ಪೂರ್ವದಲ್ಲಿ ಕೇವಲ ಸೀಮಿತ ವರ್ಗಕ್ಕೆ ಮಾತ್ರ (Class Banking) ಕಾರ್ಯನಿರ್ವಹಿಸುತ್ತಿದ್ದ ಈ ಉದ್ಯಮವಿಂದು ಸಾಮೂಹಿಕ (Mass Banking) ಉದ್ಯಮವಾಗಿ ಬೆಳೆದು ಕೆಳಸ್ತರದಲ್ಲಿ ಸಾಮಾಜಿಕ, ಆರ್ಥಿಕ ಬದಲಾವಣೆಯನ್ನು ತರುವ ಪ್ರಧಾನ ಪ್ರಭಾವಿ ಆರ್ಥಿಕ ವ್ಯವಸ್ಥೆಯಾಗಿ ಕಾರ್ಯನಿರ್ವಹಿಸುತ್ತಿರುವುದು ಗಮನಾರ್ಹ.




ಕೆನರಾ ಬ್ಯಾಂಕ್, ಬೆಂಗಳೂರು



ಸಿಂಡಿಕೇಟ್ ಬ್ಯಾಂಕ್, ಬೆಂಗಳೂರು

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಆರ್ಥಿಕ ನೀತಿ ನಿರೂಪಣೆಗಳನ್ನೂ ಆರ್ಥಿಕ ಅಭಿವೃದ್ಧಿ ಯೋಜನೆಗಳನ್ನೂ ಆದ್ಯತಾನುಸಾರ ಅನುಷ್ಠಾನಗೊಳಿಸುವಲ್ಲಿ ಈ ಸಂಸ್ಥೆಗಳು ಪ್ರಮುಖ ಪಾತ್ರವಹಿಸುತ್ತವೆ. ಸಾಲ ನೀಡಿಕೆಯಲ್ಲಿ ವ್ಯಕ್ತಿಯ ಯೋಗ್ಯತೆಗಿಂತ ಸಾಲದ ಉದ್ದೇಶಕ್ಕೆ ಪ್ರಮುಖ ಆದ್ಯತೆ ನೀಡುತ್ತಿದ್ದು, ಸಾಲ ನೀಡಿಕೆಯಲ್ಲಿ ವ್ಯಾಪಕ ಬದಲಾವಣೆಗಳನ್ನು ಅಳವಡಿಸಲಾಗುತ್ತಿದೆ. ಆ ಪ್ರಕಾರ ಈಗ ಸಾಲವನ್ನು ನಿಗದಿಮಾಡಿದ ಪ್ರಮಾಣದಲ್ಲಿ ಆದ್ಯತಾವಲಯಕ್ಕೆ ನೀಡಲಾಗುತ್ತಿದೆ (Priority and Target Oriented). ಸರ್ಕಾರದ ಅತ್ಯಂತ ಜನಪ್ರಿಯ ಸಾರ್ವಜನಿಕ ಸಾಲ ಯೋಜನೆಯಾಗಿದ್ದ ಸಾಲಮೇಳ (Loan Mela) (೧೯೮೫–೧೯೮೭) ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ರಾಜ್ಯದ ಸರ್ಕಾರಿ ಬ್ಯಾಂಕುಗಳ ಜೊತೆಗೆ ಖಾಸಗಿವಲಯ ಮತ್ತು ಸಹಕಾರಿ ವಲಯದ ಬ್ಯಾಂಕುಗಳೂ ಸಹ ಕಡಿಮೆ ಇಲ್ಲದಂತೆ ಸಾಲ ನೀಡಿಕೆಯಲ್ಲಿ ಸ್ಪಂದಿಸಿವೆ. ಅದರಂತೆ ಗ್ರಾಮೀಣ ಬ್ಯಾಂಕುಗಳನ್ನು ಪ್ರಾಯೋಜಿಸುವಲ್ಲಿಯೂ ಕರ್ನಾಟಕದ ಬ್ಯಾಂಕುಗಳು ರಾಷ್ಟ್ರದಲ್ಲಿಯೇ ಮುನ್ನಡೆ ಸಾಧಿಸಿವೆ.

ಕರ್ನಾಟಕದ ಬ್ಯಾಂಕುಗಳು ಬದಲಾದ ಹೊಸಬಗೆಯ ಪ್ರಗತಿದಾಯಕ (Progressive) ಸಾಲ ನೀಡಿಕೆ ಯೋಜನೆಗಳಾದ ಮಾರ್ಗದರ್ಶಿ(ಲೀಡ್)ಬ್ಯಾಂಕ್ ಯೋಜನೆ, ವ್ಯತ್ಯಸ್ತ ಬಡ್ಡಿದರ ಸಾಲ (D.I.R), ಸಮಗ್ರ ಗ್ರಾಮೀಣ ಅಭಿವೃದ್ಧಿ ಸಾಲ (IRDP), ೨೦ ಅಂಶಗಳ ಯೋಜನಾ ಸಾಲ (20 Point programme), ಅಂತ್ಯೋದಯ, ಗ್ರಾಮಗಳ ಸರ್ವಾಂಗೀಣ ಅಭಿವೃದ್ಧಿಗೆ ವಾಣಿಜ್ಯ ಬ್ಯಾಂಕುಗಳಿಂದ ಗ್ರಾಮಗಳ ದತ್ತು ಸ್ವೀಕಾರ ಯೋಜನೆ, ಸಮಗ್ರ ಅಭಿವೃದ್ಧಿಗೆ ಸಾಲ ಮುಂತಾದ ಹತ್ತು ಹಲವಾರು ಪ್ರಗತಿಪರ ಯೋಜನೆಗಳನ್ನು ರಾಜ್ಯದ ಬ್ಯಾಂಕಿಂಗ್ ವಲಯ ಸಂಪೂರ್ಣವಾಗಿ ಕಾರ್ಯರೂಪಕ್ಕೆ ತಂದಿರುವುದು ಗಮನಾರ್ಹ. ರಾಜ್ಯದ ಅನೇಕ ವಾಣಿಜ್ಯ ಬ್ಯಾಂಕುಗಳು ತಮ್ಮ ಹಿಂದಿನ ಸಾಂಪ್ರದಾಯಕ ಚಟುವಟಿಕೆಗಳನ್ನು ‘ಮರ್ಚೆಂಟ್ ಬ್ಯಾಂಕಿಂಗ್’ (Merchant Banking)ನತ್ತ ಬದಲಾಯಿಸಿಕೊಂಡಿದ್ದು, ಗೃಹಸಾಲ, ಅಡವು ಸಾಲ, ಲೀಸಿಂಗ್(Leasing) ಮುಂತಾದ ಸೇವೆಗಳನ್ನು ಗ್ರಾಹಕರಿಗೆ ಸ್ಪರ್ಧಾತ್ಮಕವಾಗಿ ಒದಗಿಸುತ್ತಿವೆ.

೧೯೭೬–೭೭ರಲ್ಲಿ ಗ್ರಾಮೀಣ ಬ್ಯಾಂಕುಗಳನ್ನು ಆರಂಭಮಾಡಿದ್ದರಿಂದ ಗ್ರಾಮೀಣ ಪ್ರದೇಶಗಳಲ್ಲಿ ಸುಧಾರಿತ, ವ್ಯಾಪಕ ಮತ್ತು ಪರಿಣಾಮಕಾರಿ ಬ್ಯಾಂಕಿಂಗ್ ಸೇವೆಗಳನ್ನು ಒದಗಿಸುವಲ್ಲಿ ಸಹಕಾರಿಯಾಗಿದೆ. ಇಂದು ಗ್ರಾಮೀಣ ಪ್ರದೇಶಗಳು ಮೊದಲಿಗಿಂತಲೂ (೧೯೬೪) ಹೆಚ್ಚು ವ್ಯಾಪಕ ಬ್ಯಾಂಕಿಂಗ್ ಸೇವಾ ಸೌಲಭ್ಯಗಳನ್ನು ಹೊಂದಿದ್ದು, ರಾಜ್ಯದ ಎಲ್ಲಾ ಜಿಲ್ಲೆಗಳು ಗ್ರಾಮೀಣ ಬ್ಯಾಂಕುಗಳನ್ನು ಹೊಂದಿದ್ದು, ಗ್ರಾಮ ಮತ್ತು ನಗರ ಪ್ರದೇಶದ ಆರ್ಥಿಕ ಅಸಮತೋಲನವನ್ನು ತಕ್ಕಮಟ್ಟಿಗೆ ಕಡಿಮೆ ಮಾಡುವಲ್ಲಿ ಈ ಹೊಸ ತಳಿಯ ಆರ್ಥಿಕ ಸಂಸ್ಥೆಗಳು ಸಹಾಯಕವಾಗಿವೆ.




ವಿಜಯಾ ಬ್ಯಾಂಕ್, ಬೆಂಗಳೂರು



ಕಾರ್ಪೊರೇಷನ್ ಬ್ಯಾಂಕ್, ಮಂಗಳೂರು

ರಾಜ್ಯದಲ್ಲಿ ಇದ್ದ ಒಟ್ಟು ಬ್ಯಾಂಕ್ ಶಾಖೆಗಳ ಪೈಕಿ ಜೂನ್ ೧೯೬೯ರಲ್ಲಿ ಗ್ರಾಮೀಣ ಶಾಖೆಗಳ ಪ್ರಮಾಣ ಶೇ. ೨೫ ಇದ್ದುದು ಮಾರ್ಚ ೧೯೮೯ರ ಕೊನೆಯಲ್ಲಿ ಶೇ ೫೫ಕ್ಕೆ ಹೆಚ್ಚಳಗೊಂಡಿತ್ತು. ಇದು ಮುಖ್ಯವಾಗಿ ರಾಜ್ಯಾದ್ಯಂತ ವ್ಯಾಪಿಸಿದ ಗ್ರಾಮೀಣ ಬ್ಯಾಂಕುಗಳಿಂದಾಗಿ ಸಾಧ್ಯವಾಗಿತ್ತು.

೧೯೯೦ರಲ್ಲಿ ರಾಜ್ಯದಲ್ಲಿ ಪ್ರತಿ ಒಂದು ಲಕ್ಷ ಜನಸಂಖ್ಯೆಗೆ ಸರಾಸರಿ ೯.೫ ಪ್ರಮಾಣದಲ್ಲಿ ಬ್ಯಾಂಕುಶಾಖೆಗಳ ಸಂಖ್ಯೆ ಇದ್ದರೆ ರಾಷ್ಟ್ರ ಮಟ್ಟದಲ್ಲಿ ಈ ಪ್ರಮಾಣ ಸರಾಸರಿ ೭.೧ ಆಗಿತ್ತು. ಈ ಮಾನಕದಲ್ಲಿ ರಾಜ್ಯವು ದೇಶದಲ್ಲಿ ನಾಲ್ಕನೆಯ ಸ್ಥಾನವನ್ನು ಪಡೆದಿತ್ತು. ಕರ್ನಾಟಕವನ್ನು ಒಳಗೊಂಡಂತೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಅಭಿವೃದ್ಧಿ ಹೊಂದಿದ್ದ ರಾಜ್ಯಗಳ ಮಾಲಿಕೆಯಲ್ಲಿ ಗುಜರಾತ, ಹರಿಯಾಣ, ಮಹಾರಾಷ್ಟ್ರ, ಪಂಜಾಬ ಮತ್ತು ಪಶ್ಚಿಮ ಬಂಗಾಲ ರಾಜ್ಯಗಳನ್ನು ಸೇರಿಸಬಹುದಾಗಿದೆ. ಈ ಮಾಲಿಕೆಯಲ್ಲಿ ಕರ್ನಾಟಕ ಎರಡನೇ ಸ್ಥಾನವನ್ನು ಹೊಂದಿತ್ತು. ಬ್ಯಾಂಕಿಂಗ್ ವಲಯದಲ್ಲಿ ಇತರೇ ಅಭಿವೃದ್ಧಿ ಹೊಂದಿದ ರಾಜ್ಯಗಳ ಪೈಕಿ ಕರ್ನಾಟಕದಲ್ಲಿ ಇರುವ ಗ್ರಾಮೀಣ ಬ್ಯಾಂಕುಗಳ ವಿಸ್ತರಣಾ ಪ್ರಮಾಣ ಉತ್ತಮವಾಗಿತ್ತು. ಕರ್ನಾಟಕದ ಗ್ರಾಮೀಣ ಪ್ರದೇಶದಲ್ಲಿ ಪ್ರತಿ ಒಂದು ಲಕ್ಷ ಜನಸಂಖ್ಯೆಗೆ ಸರಾಸರಿ ಎಂಟು ಗ್ರಾಮೀಣ ಬ್ಯಾಂಕುಶಾಖೆಗಳು ಸೇವೆ ಸಲ್ಲಿಸುತ್ತಿದ್ದರೆ, ಪಂಜಾಬ್‌ನಲ್ಲಿ ಈ ಪ್ರಮಾಣವು ಸರಾಸರಿ ೯ ಎಂದು ತಿಳಿದುಬರುವುದು.

ಕರ್ನಾಟಕದಲ್ಲಿ ಠೇವಣಿ ಮತ್ತು ಸಾಲ ನೀಡಿಕೆ ಅನುಪಾತ ಪ್ರಮಾಣ (C.D.Ratio) ರಾಷ್ಟ್ರಮಟ್ಟದಲ್ಲಿಯೇ ಅತಿ ಹೆಚ್ಚಾಗಿದ್ದು ಇದು ಜೂನ್ ೧೯೯೦ರಲ್ಲಿ ಶೇ ೧೦೭.೪ ಆಗಿದ್ದರೆ, ರಾಷ್ಟ್ರದಲ್ಲಿ ಅದರ ಅನುಪಾತ ಪ್ರಮಾಣ ಶೇ ೬೫.೨ ಆಗಿತ್ತು. ಕರ್ನಾಟಕದ ಅರೆನಗರ ಪ್ರದೇಶಗಳಲ್ಲಿ ಸಹ ಈ ಪ್ರಮಾಣ ಅತೀ ಹೆಚ್ಚಾಗಿದ್ದು (ಶೇ ೭೬.೯) ಭಾರತದಲ್ಲಿ ಈ ಪ್ರಮಾಣ ಶೇ ೫೦.೫ ಆಗಿತ್ತು ಎಂದು ವರದಿಯಾಗಿದೆ. ಕರ್ನಾಟಕದಲ್ಲಿ ವಾಣಿಜ್ಯ ಬ್ಯಾಂಕುಗಳು ನೀಡಿದ ಒಟ್ಟು ಸಾಲದಲ್ಲಿ ಆದ್ಯತಾವಲಯ ಮತ್ತು ದುರ್ಬಲ ವರ್ಗಗಳಿಗೆ ನೀಡಿದ ಸಾಲದ ಪ್ರಮಾಣ ಭಾರತೀಯ ರಿಸರ್ವ್ ಬ್ಯಾಂಕ್ ನಿಗದಿಪಡಿಸಿದ ಪ್ರಮಾಣ ಶೇ ೪೦ಕ್ಕಿಂತ ಅಧಿಕವಾಗಿತ್ತು. ೧೯೯೧ರಲ್ಲಿ ರಾಜ್ಯದ ಬ್ಯಾಂಕುಗಳು ನೀಡಿದ ಆದ್ಯತಾವಲಯದ ಸಾಲ (₹ ೩,೪೮೭ ಕೋಟಿ) ಶೇ ೪೫ ಆಗಿತ್ತು. ರಾಷ್ಟ್ರದಲ್ಲಿ ಜನಸಂಖ್ಯೆಯ ಆಧಾರದ ಮೇಲೆ ಪ್ರಮುಖ ರಾಜ್ಯಗಳ ಪೈಕಿ, ಸರಾಸರಿ ಠೇವಣಿ ಸಂಗ್ರಹಣೆಯಲ್ಲಿ ಕರ್ನಾಟಕ ಎಂಟನೇ ಸ್ಥಾನದಲ್ಲಿ (₹ ೨೩೬೨) ಇದ್ದರೆ, ಸರಾಸರಿ ಸಾಲ ವಿತರಣೆಯಲ್ಲಿ ₹ ೧೮೪೪ ಇದ್ದು, ಇದು ರಾಷ್ಟ್ರದ ಸರಾಸರಿ ಪ್ರಮಾಣ ₹ ೧೫೭೦ಕ್ಕಿಂತ ಅಧಿಕವಾಗಿತ್ತು. ಆದರೆ ಇದು ಮಹಾರಾಷ್ಟ್ರ (₹ ೩೮೦೧), ಪಂಜಾಬ್ (₹ ೨,೨೦೧), ತಮಿಳುನಾಡು (₹ ೨,೪೩೮) ಗಿಂತ ಕಡಿಮೆ ಇತ್ತು ಎಂದು ವರದಿಯಾಗಿತ್ತು. ಆದರೂ, ರಾಜ್ಯದಲ್ಲಿ ಸಾಲ ವಿತರಣೆ ಪ್ರಮಾಣ ರಾಷ್ಟ್ರಕ್ಕೆ ಹೋಲಿಸಿದರೆ ಉತ್ತಮವಾಗಿತ್ತು.

ಭಾರತೀಯ ರಿಸರ್ವ್ ಬ್ಯಾಂಕಿನ ವರದಿಯ ಪ್ರಕಾರ ೧೯೯೧-೧೯೯೨ರಲ್ಲಿ ರಾಜ್ಯದ ವಾಣಿಜ್ಯ ಬ್ಯಾಂಕುಗಳು ವಿವಿಧ ಸರ್ಕಾರಿ ಸಾಲಗಳಲ್ಲಿ ವಿನಿಯೋಗಿಸಿದ ಹಣದ ವಿವರಣೆ ಈ ರೀತಿ ಇತ್ತು:- ಕೇಂದ್ರ ಸರ್ಕಾರದ ಸಾಲ ಪತ್ರಗಳು ₹ ೬೪ ಕೋಟಿ, ರಾಜ್ಯ ಸರ್ಕಾರದ ಅಭಿವೃದ್ಧಿ ಸಾಲ ೧೪.೧೦ ಕೋಟಿ, ಇತರೇ ರಾಜ್ಯಗಳ ಸಾಲ ಯೋಜನೆ ₹ ೪.೫೦ ಕೋಟಿ ರಾಜ್ಯದ ಬ್ಯಾಂಕಿಂಗ್ ವಲಯಕ್ಕೆ ಸಂಬಂಧಪಟ್ಟಂತೆ ೧೯೯೨ ಮಾರ್ಚ್‌ನಲ್ಲಿ ಇದ್ದಂತೆ ಕೆಲವು ಪ್ರಮುಖ ಸೂಚ್ಯಂಕಗಳು:- ಠೇವಣಿ ಸಾಲಾನುಪಾತ ಶೇ. ೭೭.೨, ವ್ಯತ್ಯಸ್ಥ ಬಡ್ಡಿದರದ ಸಾಲ ₹ ೭೧೬೭.೩ ಲಕ್ಷ, ೨೦ ಅಂಶ ಆರ್ಥಿಕ ಕಾರ್ಯಕ್ರಮದ ಅಡಿ ನೀಡಲಾದ ಸಾಲ ₹ ೧,೨೧,೫೧೩ ಲಕ್ಷ, ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ಸಾಲ (IRDP) ₹ ೨೬, ೧೭೪ ಲಕ್ಷ, ಆಧ್ಯತಾವಲಯದ ಸಾಲ ₹ ೩,೪೭,೦೦೫ ಲಕ್ಷ, ಒಟ್ಟು ಸಾಲದಲ್ಲಿ ಆಧ್ಯತಾ ವಲಯದ ಸಾಲದ ಅನುಪಾತ ಶೇ ೪೨% ಶಾಖಾವಾರು ಸರಾಸರಿ ಠೇವಣಿ ₹ ೨೫೧.೭೫ ಲಕ್ಷ, ಮುಂಗಡ ₹ ೧೯೪.೨೪ ಲಕ್ಷ; ಗ್ರಾಮೀಣ ಠೇವಣಿ ಮತ್ತು ಮುಂಗಡಗಳು ಅನುಕ್ರಮವಾಗಿ ₹ ೧,೫೭,೩೧೮ ಲಕ್ಷ ಮತ್ತು ₹ ೧,೨೪,೭೪೨ ಲಕ್ಷ ಎಂದು ತಿಳಿದುಬರುವಂದು.

## ವ್ಯಾಪಕ ಬ್ಯಾಂಕಿಂಗ್ ಶಾಖಾ ಜಾಲ (Banking Network)

ದೇಶದ ಇತರೇ ರಾಜ್ಯಗಳಿಗೆ ಹೋಲಿಸಿದಲ್ಲಿ ಕರ್ನಾಟಕದಲ್ಲಿ ಉತ್ತಮವಾದ ಮತ್ತು ವ್ಯಾಪಕವಾದ ಬ್ಯಾಂಕುಗಳ ಶಾಖಾಜಾಲವನ್ನು ಕಾಣಬಹುದು. ರಾಷ್ಟ್ರೀಕೃತ ೧೯ ಬ್ಯಾಂಕುಗಳಲ್ಲದೇ ಭಾರತೀಯ ಸ್ಟೇಟ್ ಬ್ಯಾಂಕ್ (SBI) ಮತ್ತು ಅದರ ಏಳು ಸಹವರ್ತಿ ಬ್ಯಾಂಕ್‌ಗಳು (Associate Banks-ಇವುಗಳ ಪೈಕಿ ಸ್ಟೇಟ್ ಬ್ಯಾಂಕ ಆಫ್ ಸೌರಾಷ್ಟ್ರ ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಇಂದೋರ್ ಈ ಎರಡು ಭಾರತೀಯ ಸ್ಟೇಟ್ ಬ್ಯಾಂಕ್‌ನಲ್ಲಿ ವಿಲೀನಗೊಂಡಿರುತ್ತವೆ.) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿವೆ. ಅದೂ ಅಲ್ಲದೇ ರಾಜ್ಯದಲ್ಲೂ ೨೫ ಖಾಸಗಿ ವಲಯದ ಬ್ಯಾಂಕುಗಳು ಮತ್ತು ಆರು ಗ್ರಾಮೀಣ ಬ್ಯಾಂಕುಗಳೂ ಕಾರ್ಯ ನಿರ್ವಹಿಸುತ್ತಿವೆ. ೧೯೬೯ರಲ್ಲಿ ಬ್ಯಾಂಕುಗಳು ರಾಷ್ಟ್ರೀಕರಣವಾದಾಗ ರಾಜ್ಯದಲ್ಲಿ ೭೫೫ ಬ್ಯಾಂಕ್ ಶಾಖೆಗಳಿದ್ದವು. ಅಲ್ಲಿಂದೀಚೆಗೆ ಬ್ಯಾಂಕ್ ಜಾಲ ವಿಸ್ತರಣೆಗೊಂಡು ೨೦೧೧ ಮಾರ್ಚ್ ಅಂತ್ಯದ ವೇಳೆಗೆ ಗ್ರಾಮೀಣ ಪ್ರದೇಶದಲ್ಲಿ ೨೮೦೬, ಅರೆಪಟ್ಟಣ ಪ್ರದೇಶದಲ್ಲಿ ೧೪೯೫, ಪಟ್ಟಣ ಪ್ರದೇಶದಲ್ಲಿ ೧೫೪೯ ಹಾಗೂ ಮೆಟ್ರೋಸಿಟಿ ಪ್ರದೇಶದಲ್ಲಿ ೧೪೧೮ ಶಾಖೆಗಳಿದ್ದು ಒಟ್ಟು ೭೬೮ ಬ್ಯಾಂಕ್ ಶಾಖೆಗಳಿದ್ದವು. (ಸಹಕಾರಿ ಬ್ಯಾಂಕ್ ಶಾಖೆಗಳನ್ನೂ ಒಳಗೊಂಡಿವೆ.)

೨೦೧೧ರ ಮಾರ್ಚ್ ಕೊನೆಯಲ್ಲಿ ರಾಜ್ಯದಲ್ಲಿ ಸರಾಸರಿ ೮,೫೦೦ ಜನಸಂಖ್ಯೆಗೆ ಒಂದರಂತೆ ಬ್ಯಾಂಕ್ ಶಾಖೆಯು ಸೇವೆ ಸಲ್ಲಿಸುತ್ತಿತ್ತು. ಇದು ರಾಷ್ಟ್ರೀಯ ಸರಾಸರಿ ೧೪೦೦೦ ಕ್ಕಿಂತ ಗಣನೀಯವಾಗಿ ಉತ್ತಮವಾಗಿದೆ. ಶಾಖಾವಾರು ಜನಸಂಖ್ಯೆಯ ವಿಚಾರದಲ್ಲಿ ತಲಾ ೮,೦೦೦ ದಷ್ಟಿರುವ ಕೇರಳ, ಪಂಜಾಬ್, ಮತ್ತು ದೆಹಲಿಯ ನಂತರದ ಸ್ಥಾನ ಕರ್ನಾಟಕದ್ದಾಗಿರುತ್ತದೆ. ಇತರೆ ರಾಜ್ಯಗಳಿಗೆ ಹೋಲಿಸಿದಲ್ಲಿ ಸರಾಸರಿ ಠೇವಣಿ ಸಂಗ್ರಹ ಹಾಗೂ ಸಾಲ ನೀಡಿಕೆಯಲ್ಲಿ ರಾಜ್ಯವು ಕ್ರಮವಾಗಿ ನಾಲ್ಕು ಮತ್ತು ಐದನೇ ಸ್ಥಾನ ಹೊಂದಿರುತ್ತದೆ. ೨೦೧೧ ಮಾರ್ಚ್ ಅಂತ್ಯಕ್ಕೆ ವಾಣಿಜ್ಯ ಬ್ಯಾಂಕುಗಳು ಒಟ್ಟಾರೆ ಸಂಗ್ರಹಿಸಿದ ಸರಾಸರಿ ಠೇವಣಿ ಮೊತ್ತ (ಗ್ರಾಮೀಣ ಬ್ಯಾಂಕುಗಳೂ ಒಳಗೊಂಡಂತೆ) ₹ ೩,೪೯,೦೦೯ ಕೋಟಿ; ಹಾಗೂ ಸಾಲನೀಡಿಕೆ ₹ ೨,೫೩,೧೧೮ ಕೋಟಿ; ರಾಜ್ಯದ ಠೇವಣಿ ಮತ್ತು ಸಾಲದ ಅನುಪಾತವು ಮಾರ್ಚ್ ೨೦೧೧ರಲ್ಲಿ ಶೇ.೭೫ ರಷ್ಟಿದೆ. ಅದರಂತೆ ಆದ್ಯತಾವಲಯಕ್ಕೆ ನೀಡಿದ್ದ ಮುಂಗಡ ಮೊತ್ತ ₹ ೧೦೫೭೪೬ ಕೋಟಿ, ಇದು, ಒಟ್ಟು ಮುಂಗಡದ ಶೇ ೪೧.೩ ರಷ್ಟಿದ್ದು, ಭಾರತೀಯ ರಿಸರ್ವ್ ಬ್ಯಾಂಕ್ ನಿಗದಿಪಡಿಸಿದ್ದ ಪ್ರಮಾಣಕ್ಕಿಂತ ಅಧಿಕವಾಗಿದೆ. ೨೦೦೯ ರಿಂದ ೨೦೧೧ನೇ ಸಾಲಿನಲ್ಲಿ ರಾಜ್ಯದ ಬ್ಯಾಂಕುಗಳಲ್ಲಿನ ಆದ್ಯತಾ ವಲಯದ ಮುಂಗಡಗಳ ವಿವರವನ್ನು ನೀಡಲಾಗಿದೆ.

**(₹ ಕೋಟಿಗಳಲ್ಲಿ)**

| ಕ್ರ.ಸಂ | ವಲಯ | ೨೦೦೯ | ೨೦೧೦ | ೨೦೧೧ |
|---|---|---|---|---|
| ೧ | ಒಟ್ಟು ಆದ್ಯತಾ ವಲಯಗಳ ಮುಂಗಡಗಳು | ೭೧,೮೧೦ | ೯೦,೭೦೦ | ೧,೦೫,೭೪೬ |
| ೨ | ಕೃಷಿ ಮತ್ತು ಸಂಬಂಧಿತ ವಲಯಗಳು | ೨,೯೯೬ | ೪೨,೫೪೯ | ೪೭,೦೭೧ |
| ೩ | ಸಣ್ಣ ಪ್ರಮಾಣದ ಉದ್ಯಮಗಳು | ೧೬,೯೨೦ | ೨೯,೮೯೬ | ೪೦,೫೩೨ |
| ೪ | ಅನುಸೂಚಿತ ಜಾತಿ ಹಾಗೂ ಪಂಗಡಗಳಿಗೆ ಮುಂಗಡಗಳು | ೫,೩೧೫ | ೬,೩೭೪ | ೭,೮೭೮ |
| ೫ | ಹಿಂದುಳಿದ ವರ್ಗಗಳ ಮುಂಗಡಗಳು | ೬,೪೮೯ | ೯,೦೭೯ | ೧೦,೬೮೬ |
| ೬ | ಮಹಿಳೆಯರಿಗೆ ಮುಂಗಡಗಳು | ೧೩,೪೬೬ | ೧೬,೭೪೩ | ೨೦,೬೮೬ |
| ೭ | ಒಟ್ಟು ಮುಂಗಡಗಳಲ್ಲಿ ಆದ್ಯತಾ ವಯಗಳ ಶೇಕಡಾವಾರು | ೪೬.೨೧ | ೪೨.೩೯ | ೪೧.೩೧ |
| ೮ | ಒಟ್ಟು ಮುಂಗಡಗಳಲ್ಲಿ ದುರ್ಬಲ ವರ್ಗದವರಿಗೆ ನೀಡಿದ ಮುಂಗಡಗಳ ಶೇಕಡಾವಾರು | ೧೦.೩೬ | ೯.೬೯ | ೧೦.೬೯ |

ಆರ್ಥಿಕ ಒಳಗೊಳ್ಳುವಿಕೆಯು ಕರ್ನಾಟಕ ಸರ್ಕಾರದಿಂದ ಅಳವಡಿಸಲ್ಪಟ್ಟ ಬಹು ಮುಖ್ಯ ಹಣಕಾಸು ನೀತಿಗಳಲ್ಲಿ ಒಂದಾಗಿದ್ದು, ರಾಜ್ಯದ ಏಳು ಜಿಲ್ಲೆಗಳಲ್ಲಿ ಆರ್ಥಿಕ ಒಳಗೊಳ್ಳುವಿಕೆಯನ್ನು ಜಾರಿಗೊಳಿಸಲು ಪೈಲೆಟ್ ಪ್ರಾಜೆಕ್ಟ್‌ನ್ನು ರೂಪಿಸಲಾಗಿದ್ದು, ರಾಜ್ಯ ಸರ್ಕಾರವು ಏಳು ಬ್ಯಾಂಕುಗಳೊಂದಿಗೆ ತಿಳುವಳಿಕೆ ಪತ್ರಕ್ಕೆ ಸಹಿ ಹಾಕಿದೆ. ಈ ಯೋಜನೆಯಡಿಯಲ್ಲಿ ಮಾಹಿತಿ ತಂತ್ರಜ್ಞಾನದ ಮೂಲಕ ಆರ್ಥಿಕ ಒಳಗೊಳ್ಳುವಿಕೆಯನ್ನು ಜಾರಿಗೊಳಿಸಲು ಉದ್ದೇಶಿಸಲಾಗಿದ್ದು. ಈ ಜಿಲ್ಲೆಗಳ ಪೈಕಿ ನಾಲ್ಕು ಜಿಲ್ಲೆಗಳಲ್ಲಿ ಭಾರತ ಸರ್ಕಾರ ಮತ್ತು ರಿಸರ್ವ್ ಬ್ಯಾಂಕ್ ಆಫ್ ಇಂಡಿಯ ಸೂಚಿಸಿರುವಂತೆ " ಒಂದು ಜಿಲ್ಲೆ ಹಲವು ಬ್ಯಾಂಕ್" ಮಾದರಿಯನ್ನು ಜಾರಿಗೊಳಿಸಲಾಗುತ್ತಿದೆ. ಈ ಯೋಜನೆಯನ್ನು ಇನ್ನುಳಿದ ೨೩ ಜಿಲ್ಲೆಗಳಲ್ಲೂ ಕ್ರಮೇಣ ಜಾರಿಗೊಳಿಸಲು ಸರ್ಕಾರವು ಉದ್ದೇಶಿಸಿದೆ.

ಭಾರತ ಸರ್ಕಾರವು ೧೯೯೫ರಲ್ಲಿ ಸ್ಥಾಪಿಸಿದ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಧಿ (ಆರ್.ಐ.ಡಿ.ಎಫ್) ಯೋಜನೆಯು ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿನ ವತಿಯಿಂದ ಅನುಷ್ಟಾನಗೊಳ್ಳುತ್ತಿದ್ದು, ೨೦೧೨ ಫೆಬ್ರವರಿ ೧೬ರ ವರೆಗೆ ಈ ಯೋಜನೆಯ ವಿವಿಧ ಹಂತಗಳ ಅನುಷ್ಠಾನಕ್ಕೆ ಒಟ್ಟು ₹ ೬,೯೬೬.೯೩ ಕೋಟಿ ಸಾಲವನ್ನು ಮಂಜೂರು ಮಾಡಿದೆ. ಈ ಯೋಜನೆಯಡಿ ಮುಕ್ತಾಯಗೊಂಡ ಕಾರ್ಯಕ್ರಮಗಳು ಈ ರೀತಿ ಇವೆ. ಗಾಮೀಣ ರಸ್ತೆಗಳು, ಗ್ರಾಮೀಣ ಸೇತುವೆಗಳು, ಸಣ್ಣ ನೀರಾವರಿ ಯೋಜನೆ, ಮಧ್ಯಮ ನೀರಾವರಿ ಯೋಜನೆ, ದೊಡ್ಡ ನೀರಾವರಿ ಯೋಜನೆ, ಗ್ರಾಮೀಣಾ ಉಗ್ರಾಣಗಳು, ಗ್ರಾಮೀಣ ಮಾರುಕಟ್ಟೆಗಳು: ಅಂಗನವಾಡಿ ಕೇಂದ್ರಗಳು  ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಪ್ರಾಥಮಿಕ ಶಾಲಾ ಕೊಠಡಿಗಳು. ೨೦೧೨ ಮಾರ್ಚ್ ಅಂತ್ಯದವರೆಗೆ ಒಟ್ಟು ೨೯೭೨ ಯೋಜನೆಗಳ ಪೈಕಿ ೧೫೪೯೦ ಯೋಜನೆಗಳು ಪೂರ್ಣಗೊಂಡಿದ್ದವು.

ಭಾರತ ಸರ್ಕಾರವು ದಿನಾಂಕ ೧-೦೪-೧೯೯೯ಕ್ಕಿಂತ ಮೊದಲಿಗಿದ್ದ ಸ್ವಯಂ ಉದ್ಯೋಗ ಕಾರ್ಯಕ್ರಮಗಳಾದ ಐಆರ್‌ಡಿಪಿ, ಟ್ರೈಸಂ, ಡ್ವಾಕ್ರಾ, ಸಿಟ್ರಾ, ಗಂಗಾ ಕಲ್ಯಾಣ ಹಾಗೂ ದಶಲಕ್ಷ ಭಾವಿ ಯೋಜನೆಗಳನ್ನು ಪುನರ್ ರಚಿಸಿ ಸ್ವರ್ಣ ಜಯಂತಿ ಗ್ರಾಮ ಸ್ವರೋಜಗಾರ್ ಯೋಜನೆ (ಎಸ್.ಜಿ.ಎಸ್.ವೈ.)ಯನ್ನು ಜಾರಿಗೆ ತಂದಿದ್ದು, ಇದರ ಮೂಲಕ ಸ್ವಯಂ ಉದ್ಯೋಗ ಕಲ್ಪಿಸಲು ಸ್ವಸಹಾಯ ಗುಂಪು ರಚನೆ, ತರಬೇತಿ, ಸಾಲ, ತಂತ್ರಜ್ಞಾನ, ಮೂಲಸ್ವತ್ತು ಅಭಿವೃದ್ಧಿ ಮತ್ತು ಮಾರುಕಟ್ಟೆ ಅಭಿವೃದ್ಧಿ ಒದಗಿಸಲಾಗುತ್ತದೆ. ಈ ಯೋಜನೆಗೆ ನಿಧಿಗಳನ್ನು ೭೫:೨೫ರ ಅನುಪಾತದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಭರಿಸುತ್ತವೆ. ಈ ಯೋಜನೆಯಡಿ ಪ್ರತಿ ಜಿಲ್ಲೆಯಲ್ಲಿ ಜಿಲ್ಲೆಗೆ ಮೂರರಂತೆ ಸುವರ್ಣ ಮಾರಾಟ ಮಳಿಗೆಗಳನ್ನು ನಿರ್ಮಿಸುವ ಕ್ರಮ ವಹಿಸಿದೆ, ಎಇಪಿಸಿ ಸಹಭಾಗತ್ವದೊಂದಿಗೆ ಅಪೆರಲ್ ಟ್ರೈನಿಂಗ್ ಮತ್ತು ಡಿಸೈನ್ ಸೆಂಟರುಗಳನ್ನು ೨೨ ಜಿಲ್ಲೆಗಳಲ್ಲಿ ಸ್ಥಾಪಿಸಲಾಗಿರುತ್ತದೆ. ಮತ್ತು ೨೯ ಜಿಲ್ಲೆಗಳಲ್ಲಿ ರೂಡ್‌ಸೆಟ್ಸ್‌ಗಳನ್ನು ಸ್ಥಾಪಿಸಿ ಅವುಗಳ ಮೂಲಕ ಕೌಶಲ್ಯಾಭಿವೃದ್ಧಿ ತರಬೇತಿಗಳನ್ನು ನೀಡಲಾಗುತ್ತಿದ್ದು, ೨೦೦೯-೧೦ನೇ ಸಾಲಿನಲ್ಲಿ ೧೪೩೫ ವ್ಯಕ್ತಿಗಳಿಗೆ ₹ ೧.೭೩ ಕೋಟಿ ಮತ್ತು ೫೪೯೭ ಸ್ವಸಹಾಯ ಗುಂಪುಗಳಿಗೆ ₹ ೭೬.೨೫ ಕೋಟಿ. ೨೦೧೦-೧೧ನೇ ಸಾಲಿನಲ್ಲಿ ೨,೩೩೫ ವ್ಯಕ್ತಿಗಳಿಗೆ ₹ ೨.೧೫ ಕೋಟಿ ಮತ್ತು ೬,೨೨೨ ಸ್ವಸಹಾಯ ಗುಂಪುಗಳಿಗೆ ₹ ೭೯.೫೫ ಕೋಟಿ ಹಣಕಾಸಿನ ನೆರವನ್ನು ಒದಗಿಸಲಾಗಿತ್ತು.

## ರಾಜ್ಯದ ಪ್ರಮುಖ ಬ್ಯಾಂಕುಗಳು

೨೦೧೧ ಮಾರ್ಚ್ ಅಂತ್ಯಕ್ಕೆ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪ್ರಮುಖ ಬ್ಯಾಂಕಿಂಗ್ ಕಂಪನಿಗಳ ಹೆಸರು ಮತ್ತು ಅವುಗಳು ಹೊಂದಿದ್ದ ಒಟ್ಟು ಶಾಖೆಗಳ ಸಂಖ್ಯೆ (ಆವರಣದಲ್ಲಿ)ಯನ್ನು ಈ ಮುಂದಿನಂತೆ ನೀಡಲಾಗಿದೆ,. ಕೆನರಾ ಬ್ಯಾಂಕ್ (೬೪೯), ಸ್ಟೇಟ್ ಬ್ಯಾಂಕ್ ಆಫ್ ಮೈಸೂರು (೫೯೪), ಸಿಂಡಿಕೇಟ್ ಬ್ಯಾಂಕ್ (೬೨೮), ವಿಜಯಾ ಬ್ಯಾಂಕ್ (೪೮೫), ಭಾರತೀಯ ಸ್ಟೇಟ್ ಬ್ಯಾಂಕ್ (೫೦೫), ಕಾರ್ಪೊರೇಷನ್ ಬ್ಯಾಂಕ್ (೩೪೬), ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್(೧೪೦);



ಭಾರತೀಯ ಸ್ಟೇಟ್ ಬ್ಯಾಂಕ್, ಬೆಂಗಳೂರು

**ಇತರೇ ರಾಷ್ಟ್ರೀಕೃತ ಬ್ಯಾಂಕುಗಳು:** ಅಲಹಾಬಾದ್ ಬ್ಯಾಂಕ್ (೩೪), ಆಂಧ್ರ ಬ್ಯಾಂಕ್(೬೦), ಬ್ಯಾಂಕ್ ಆಫ್ ಬರೋಡ(೬೮), ಬ್ಯಾಂಕ್ ಆಫ್ ಇಂಡಿಯ (೯೨), ಬ್ಯಾಂಕ್ ಆಫ್ ಮಹಾರಾಷ್ಟ್ರ (೫೭), ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯ (೯೭), ದೇನಾ ಬ್ಯಾಂಕ್(೩೪), ಇಂಡಿಯನ್ ಬ್ಯಾಂಕ್ (೮೬), ಇಂಡಿಯನ್ ಓವರ್‌ಸೀಸ್ ಬ್ಯಾಂಕ್ (೯೭), ಓರಿಯಂಟಲ್ ಬ್ಯಾಂಕ್ ಆಫ್ ಕಾಮರ್ಸ್(೩೩), ಪಂಜಾಬ್ ನ್ಯಾಷನಲ್ ಬ್ಯಾಂಕ್(೬೩), ಪಂಜಾಬ ಮತ್ತು ಸಿಂಧ್ ಬ್ಯಾಂಕ್(೬) ಸ್ಟೇಟ್ ಬ್ಯಾಂಕ್ ಆಫ್ ಪಾಟಿಯಾಲ(೬), ಸ್ಟೇಟ್ ಬ್ಯಾಂಕ್ ಆಫ್ ಬಿಕೆನೆರ್ ಅಂಡ್ ಜಯಪುರ್ (೩), ಸ್ಟೇಟ್ ಬ್ಯಾಂಕ್ ಆಫ್ ಇಂದೂರ್(೨), ಸ್ಟೇಟ್ ಬ್ಯಾಂಕ್ ಆಫ್ ಟ್ರಾವಂಕೂರ್(೨೨), ಯು.ಕೋ ಬ್ಯಾಂಕ್ (೪೦), ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ (೧೩೬), ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾ (೧೪)

**ಇತರೇ ವಾಣಿಜ್ಯ ಬ್ಯಾಂಕುಗಳು:** ಕರ್ನಾಟಕ ಬ್ಯಾಂಕ್ (೩೦೨), ವೈಶ್ಯಬ್ಯಾಂಕ್(೧೧೯), ಬ್ಯಾಂಕ್ ಆಫ್ ರಾಜಸ್ತಾನ(೪), ಇಂಡಿಯನ್ ಓವರ್ಸೀಸ್ ಬ್ಯಾಂಕ್(೯೭), ಕ್ಯಾಥೋಲಿಕ್ ಸಿರಿಯನ್ ಬ್ಯಾಂಕ್(೧೫), ಸಿಟಿ ಯೂನಿಯನ್ ಬ್ಯಾಂಕ್(೧೯), ಧನಲಕ್ಷ್ಮಿ ಬ್ಯಾಂಕ್(೧೪), ಫೆಡರಲ್ ಬ್ಯಾಂಕ್(೫೨), ಜಮ್ಮು ಮತ್ತು ಕಾಶ್ಮೀರ ಬ್ಯಾಂಕ್(೫), ಕರೂರ ವೈಶ್ಯ ಬ್ಯಾಂಕ್(೨೭), ಲಕ್ಷ್ಮಿವಿಲಾಸ ಬ್ಯಾಂಕ್(೨೧), ರತ್ನಾಕರ ಬ್ಯಾಂಕ್(೧೪), ಸೌತ್ ಇಂಡಿಯನ್ ಬ್ಯಾಂಕ್(೩೭), ತಮಿಳುನಾಡು ಮರ್ಕೆಂಟೈಲ್ ಬ್ಯಾಂಕ್(೫), ಡೆವೆಲಪ್‌ಮೆಂಟ್ ಕ್ರೆಡಿಟ್ ಬ್ಯಾಂಕ್ (೬)ಆಕ್ಸಿಸ್ ಬ್ಯಾಂಕ್ (೯೭), ಐ.ಸಿ.ಐ.ಸಿ.ಐ ಬ್ಯಾಂಕ್ (೧೩೬), ಎಚ್.ಡಿ.ಎಫ್.ಸಿ ಬ್ಯಾಂಕ್ (೧೧೧), ಅಯ್.ಡಿ.ಬಿ.ಅಯ್ ಬ್ಯಾಂಕ್ (೩೬), ಇಂಡಸ್‌ಲ್ಯಾಂಡ್ ಬ್ಯಾಂಕ್(೧೪), ಕೋಟಕ್ ಮಹೇಂದ್ರ ಬ್ಯಾಂಕ್ (೧೮).

## ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳು

ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಗ್ರಾಮೀಣ ಬಡಜನರ ಪ್ರಗತಿಯನ್ನು ಕೇಂದ್ರ ಬಿಂದುವಾಗಿರಿಸಿ ಕೊಂಡು ಉತ್ತಮ ಕಾರ್ಯಾಚರಣೆ ಮತ್ತು ಆರ್ಥಿಕ ಬಲವರ್ಧನೆಗಳನ್ನು ಸಾಧಿಸಿವೆ. ಬಳ್ಳಾರಿಯಲ್ಲಿ ಸ್ಥಾಪನೆಗೊಂಡ ಕೆನರಾ ಬ್ಯಾಂಕ್ ಪ್ರಾಯೋಜಿತ ತುಂಗಭದ್ರಾ ಗ್ರಾಮೀಣ ಬ್ಯಾಂಕ್ (೧೯೭೬) ಕರ್ನಾಟಕದ ಮೊದಲ ಗ್ರಾಮೀಣ ಬ್ಯಾಂಕಾಗಿರುತ್ತದೆ. ರಾಜ್ಯದಲ್ಲಿಯ ೧೩ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳಲ್ಲಿ ಕೆನರಾ ಬ್ಯಾಂಕ್ ಪ್ರಾಯೋಜಿತ ತುಂಗಭದ್ರಾ ಗ್ರಾಮೀಣ ಬ್ಯಾಂಕ್, ಚಿತ್ರದುರ್ಗ ಗ್ರಾಮೀಣ ಬ್ಯಾಂಕ್, ಕೋಲಾರ ಗ್ರಾಮೀಣ ಬ್ಯಾಂಕ್: ಸಹ್ಯಾದ್ರಿ ಗ್ರಾಮೀಣ ಬ್ಯಾಂಕ್‌ಗಳನ್ನು ವಿಲಿನಗೊಳಿಸಿ ಪ್ರಗತಿ ಗ್ರಾಮೀಣ ಬ್ಯಾಂಕೆಂದೂ, ಸಿಂಡಿಕೇಟ್ ಬ್ಯಾಂಕ್ ಪ್ರಾಯೋಜಿತ, ಬಿಜಾಪುರ ಗ್ರಾಮೀಣ ಬ್ಯಾಂಕ್, ನೇತ್ರಾವತಿ ಗ್ರಾಮೀಣ ಬ್ಯಾಂಕ್, ಮಲಪ್ರಭಾ ಗ್ರಾಮೀಣ ಬ್ಯಾಂಕ್ ಹಾಗೂ ವರದಾ ಗ್ರಾಮೀಣ ಬ್ಯಾಂಕ್‌ಗಳನ್ನು ವಿಲೀನಗೊಳಿಸಿ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕೆಂದೂ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಪ್ರಾಯೋಜಿತ ಕಾವೇರಿ ಗ್ರಾಮೀಣ ಬ್ಯಾಂಕ್, ಕಲ್ಪತರು ಗ್ರಾಮೀಣ ಬ್ಯಾಂಕ್ ಇವುಗಳನ್ನು ವಿಲೀನಗೊಳಿಸಿ ಕಾವೇರಿ ಕಲ್ಪತರು ಗ್ರಾಮೀಣ ಬ್ಯಾಂಕೆಂದು ನಾಮಕರಣ ಮಾಡಲಾಗಿದೆ. ಇನ್ನುಳಿದ ಕೃಷ್ಣಾ ಗ್ರಾಮೀಣ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಪ್ರಾಯೋಜಕತ್ವದಲ್ಲಿ, ಚಿಕ್ಕಮಗಳೂರು–ಕೊಡಗು ಗ್ರಾಮೀಣ ಬ್ಯಾಂಕ್ ಕಾರ್ಪೊರೇಷನ್ ಬ್ಯಾಂಕ್ ಪ್ರಾಯೋಜಕತ್ವದಲ್ಲಿ ಮತ್ತು ಕೊನೆಯ ಗ್ರಾಮೀಣ ಬ್ಯಾಂಕಾಗಿ ೧೯೮೫ರಲ್ಲಿ ಮಂಡ್ಯದಲ್ಲಿ ಸ್ಥಾಪನೆಗೊಂಡ ವಿಶ್ವೇಶ್ವರಯ್ಯ ಗ್ರಾಮೀಣ ಬ್ಯಾಂಕ್, ವಿಜಯ ಬ್ಯಾಂಕ್ ಪ್ರಾಯೋಜಕತ್ವದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ರಾಜ್ಯದಲ್ಲಿಯ ಆರು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ (ವಿಲೀನದ ನಂತರ) ಶಾಖೆಗಳ ಜಾಲ ಮಾರ್ಚ್ ೨೦೦೮ ಅಂತ್ಯಕ್ಕೆ ೧೧೫೩ ಆಗಿದೆ.

**ವಿದೇಶಿ ಬ್ಯಾಂಕುಗಳು:** ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿದ್ದ ವಿದೇಶಿ ಬ್ಯಾಂಕುಗಳು, ಎ.ಎನ್. ಜೆಡ್ (ANZ) ಗ್ರಿಂಡಲೇಸ್ ಬ್ಯಾಂಕ್, ಪಿ.ಎಲ್.ಸಿ, ಹಾಂಗ್‌ಕಾಂಗ್ ಮತ್ತು ಶಾಂಗೈ ಬ್ಯಾಂಕಿಂಗ್

ಕಾರ್ಪೋರೇಷನ್, ಸಿಟಿ ಬ್ಯಾಂಕ್, ಬಿ.ಎನ್.ಪಿ, ಪಾರಿಬಾಸ್, ಅಬುದಾಭಿ ಕಮರ್ಷಿಯಲ್ ಬ್ಯಾಂಕ್, ಸ್ಟಾಂಡರ್ಡ್ ಚಾರ್ಟರ್ಡ್ ಬ್ಯಾಂಕ್, ಡಾಯಿಚ್ ಬ್ಯಾಂಕ್, ಬ್ಯಾಂಕ್ ಆಫ್ ನೋವಾ ಸ್ಕಾಟೀಯ, ಬ್ಯಾಂಕ್ ಆಫ್ ಮಸ್ಕಟ್ ಇಂಟರ್‌ನ್ಯಾಷನಲ್ ಹಾಗೂ ಸೊಸೈಟಿ ಜನರಲ್ ಬ್ಯಾಂಕು ಇರುತ್ತವೆ. ೨೦೧೦ರ ಮಾರ್ಚ್ ಕೊನೆಯಲ್ಲಿ ರಾಜ್ಯಾದ್ಯಂತ ಇದ್ದ ಸಾರ್ವಜನಿಕ ವಲಯದ ೨೭, ಖಾಸಗಿ ವಲಯದ ೧೬ಕ್ಕೂ ಹೆಚ್ಚು ಬ್ಯಾಂಕುಗಳು ಮತ್ತು ಆರು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಸೇರಿದಂತೆ ಒಟ್ಟು ೭೪೯೭ ಶಾಖೆಗಳು ಇದ್ದವು. ಎಲ್ಲಾ ವಲಯದ ಬ್ಯಾಂಕುಗಳು ಸಂಗ್ರಹಿಸಿದ್ದ ಒಟ್ಟು ಠೇವಣಿ ಮತ್ತು ನೀಡಿದ ಸಾಲ ಮುಂಗಡಗಳು ಕ್ರಮವಾಗಿ ₹ ೨,೮೧,೬೫೫ ಕೋಟಿ ಮತ್ತು ₹ ೨,೨೪,೩೪೯ ಕೋಟಿ ಎಂದು ವರದಿಯಿಂದ ತಿಳಿದು ಬರುತ್ತದೆ, ಕರ್ನಾಟಕದಲ್ಲಿ ೧೯೬೯–೨೦೧೦ರ ಅವಧಿಯಲ್ಲಿ ಜಿಲ್ಲಾವಾರು ವಾಣಿಜ್ಯ ಬ್ಯಾಂಕ್ ಶಾಖೆಗಳ ಸಂಖ್ಯೆ, ಠೇವಣಿ ಸಂಗ್ರಹಣೆ ಮತ್ತು ಸಾಲ ಮುಂಗಡಗಳ ವಿವರಣೆಯನ್ನು ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ ೬.೧: ವಾಣಿಜ್ಯ ಹಾಗೂ ಪ್ರಾಂತೀಯ ಗ್ರಾಮೀಣ ಬ್ಯಾಂಕುಗಳ ಜಿಲ್ಲಾವಾರು ವಿವರ**

| ಜಿಲ್ಲೆಗಳು | | ೧೯೬೯ | ೧೯೮೦ | ೧೯೯೧ | ೧೯೯೪ | ೧೯೯೮ | ೨೦೦೩ | ೨೦೦೬ | ೨೦೧೦ |
|---|---|---|---|---|---|---|---|---|---|
| ಬೆಂಗಳೂರು | ಶಾಖೆಗಳು | ೧೫೦ | ೫೪೦ | ೬೩೭ | ೬೫೭ | ೭೫೫ | ೮೫೯ | ೯೮೪ | ೧೪೨೩ |
| | ಠೇವಣಿ | ೧೦೧ | ೭೯೨ | ೪,೮೨೦ | ೬,೫೩೮ | ೧೫,೧೯೦ | ೪೧,೨೭೨ | ೮೫,೩೪೯ | ೧೮೭೫೧೬ |
| | ಸಾಲಮುಂಗಡ | ೯೦ | ೭೨೭ | ೪,೩೦೪ | ೫,೪೯೩ | ೧೨,೩೧೦ | ೨೬,೪೫೪ | ೬೬,೧೪೯ | ೧೪೯೧೮೦ |
| ಬೆಂಗಳೂರು ಗ್ರಾಮೀಣ | ಶಾಖೆಗಳು | – | – | ೧೦೧ | ೧೦೨ | ೧೦೭ | ೧೦೯ | ೧೧೧ | ೧೧೫ |
| | ಠೇವಣಿ | – | – | ೧೩೨ | ೧೮೪ | ೩೪೮ | ೮೭೨ | ೧,೫೪೫ | ೨೬೪೮ |
| | ಸಾಲಮುಂಗಡಗಳು | – | – | ೧೧೧ | ೧೩೮ | ೨೨೫ | ೩೬೯ | ೭೬೩ | ೧೪೯೮ |
| ರಾಮನಗರ | ಶಾಖೆಗಳು | ೨೦೦೭ರಲ್ಲಿ ಈ ಜಿಲ್ಲೆ ಹೊಸದಾಗಿ ರಚನೆಯಾಗಿದೆ | | | | | | | ೧೦೬ |
| | ಠೇವಣಿ | | | | | | | | ೨೩೦೩ |
| | ಸಾಲಮುಂಗಡಗಳು | | | | | | | | ೮೫೮ |
| ಬೆಳಗಾವಿ | ಶಾಖೆಗಳು | ೬೪ | ೨೦೧ | ೨೮೨ | ೨೮೪ | ೩೦೬ | ೩೨೪ | ೩೩೮ | ೪೮೮ |
| | ಠೇವಣಿ | ೧೮ | ೧೨೨ | ೫೯೪ | ೭೮೩ | ೧,೪೧೪ | ೨,೭೯೧ | ೪,೧೦೩ | ೮೮೮೫ |
| | ಸಾಲಮುಂಗಡಗಳು | ೮ | ೬೨ | ೩೭೦ | ೪೨೩ | ೭೭೧ | ೧,೫೨೯ | ೩,೦೮೩ | ೫೯೦೭ |
| ಬಳ್ಳಾರಿ | ಶಾಖೆಗಳು | ೩೦ | ೧೧೧ | ೧೭೨ | ೧೭೨ | ೧೭೫ | ೧೫೮ | ೧೬೪ | ೨೬೫ |
| | ಠೇವಣಿ | ೫ | ೪೩ | ೨೩೧ | ೩೨೯ | ೫೭೨ | ೧,೧೪೯ | ೨,೫೩೮ | ೬೪೯೪ |
| | ಸಾಲಮುಂಗಡಗಳು | ೭ | ೪೫ | ೨೨೭ | ೨೮೯ | ೪೮೧ | ೯೮೭ | ೨,೪೯೮ | ೬೭೫೦ |
| ಬೀದರ್ | ಶಾಖೆಗಳು | ೭ | ೩೬ | ೯೦ | ೯೨ | ೯೩ | ೯೧ | ೮೭ | ೧೩೬ |
| | ಠೇವಣಿ | ೧ | ೧೧ | ೯೯ | ೧೩೯ | ೨೫೭ | ೫೦೦ | ೭೭೬ | ೧೪೩೦ |
| | ಸಾಲಮುಂಗಡಗಳು | ೧ | ೮ | ೭೨ | ೯೧ | ೧೬೭ | ೨೭೩ | ೪೮೯ | ೧೦೪೫ |
| ಬಿಜಾಪುರ | ಶಾಖೆಗಳು | ೪೦ | ೧೧೮ | ೨೩೯ | ೨೪೦ | ೨೪೪ | ೧೨೨ | ೧೨೨ | ೧೮೮ |
| | ಠೇವಣಿ | ೬ | ೪೭ | ೨೯೫ | ೪೦೪ | ೯೦೫ | ೮೧೭ | ೧,೧೧೧ | ೨೪೦೨ |
| | ಸಾಲಮುಂಗಡಗಳು | ೩ | ೨೬ | ೧೯೨ | ೨೫೧ | ೪೯೫ | ೫೭೮ | ೧,೦೫೫ | ೨೨೯೧ |
| ಬಾಗಲಕೋಟೆ | ಶಾಖೆಗಳು | ೧೯೯೭ರಲ್ಲಿ ಈ ಜಿಲ್ಲೆ ಹೊಸದಾಗಿ ರಚನೆಯಾಗಿದೆ | | | | | ೧೨೧ | ೧೨೫ | ೨೦೧ |
| | ಠೇವಣಿ | | | | | | ೯೧೪ | ೧,೨೧೫ | ೨೭೬೧ |
| | ಸಾಲಮುಂಗಡಗಳು | | | | | | ೫೯೯ | ೧,೧೦೩ | ೨೫೮೬ |
| ಚಾಮರಾಜನಗರ | ಶಾಖೆಗಳು | ೧೯೯೭ರಲ್ಲಿ ಈ ಜಿಲ್ಲೆ ಹೊಸದಾಗಿ ರಚನೆಯಾಗಿದೆ | | | | | ೫೫ | ೫೫ | ೮೪ |
| | ಠೇವಣಿ | | | | | | ೨೫೫ | ೩೬೮ | ೭೪೭ |
| | ಸಾಲಮುಂಗಡಗಳು | | | | | | ೧೭೩ | ೩೪೨ | ೬೯೪ |

| | | | | | | | | | |
|---|---|---|---|---|---|---|---|---|---|
| ಚಿಕ್ಕಮಗಳೂರು | ಶಾಖೆಗಳು | ೩೧ | ೭೯ | ೧೩೦ | ೧೩೦ | ೧೩೨ | ೧೩೪ | ೧೩೯ | ೧೮೮ |
| | ಠೇವಣಿ | ೫ | ೪೫ | ೨೦೨ | ೨೬೬ | ೫೫೯ | ೯೨೫ | ೧,೨೬೪ | ೨೫೩೬ |
| | ಸಾಲಮುಂಗಡಗಳು | ೪ | ೩೭ | ೧೭೩ | ೨೧೦ | ೫೮೪ | ೧,೦೪೯ | ೧,೨೪೩ | ೨೧೨೦ |
| ಚಿತ್ರದುರ್ಗ | ಶಾಖೆಗಳು | ೨೧ | ೮೦ | ೧೯೫ | ೧೯೯ | ೨೦೩ | ೧೧೬ | ೧೧೫ | ೧೮೯ |
| | ಠೇವಣಿ | ೪ | ೩೯ | ೨೩೬ | ೩೨೧ | ೫೬೦ | ೫೪೯ | ೮೫೮ | ೧೭೫೨ |
| | ಸಾಲಮುಂಗಡಗಳು | ೬ | ೩೩ | ೨೦೬ | ೨೪೦ | ೪೪೭ | ೪೧೧ | ೭೪೪ | ೧೪೫೧ |
| ದಾವಣಗೆರೆ | ಶಾಖೆಗಳು | ೧೯೯೭ರಲ್ಲಿ ಈ ಜಿಲ್ಲೆ ಹೊಸದಾಗಿ ರಚನೆಯಾಗಿದೆ | | | | | ೧೨೫ | ೧೨೭ | ೧೮೦ |
| | ಠೇವಣಿ | | | | | | ೭೭೫ | ೧,೧೯೦ | ೨೬೬೯ |
| | ಸಾಲಮುಂಗಡಗಳು | | | | | | ೬೯೪ | ೧,೩೨೮ | ೨೫೭೨ |
| ದಕ್ಷಿಣಕನ್ನಡ | ಶಾಖೆಗಳು | ೧೬೮ | ೩೭೨ | ೪೬೨ | ೪೭೨ | ೪೯೬ | ೩೦೮ | ೩೨೨ | ೩೯೫ |
| | ಠೇವಣಿ | ೪೦ | ೨೫೭ | ೧,೩೭೦ | ೧,೯೨೮ | ೩,೦೨೦ | ೫,೨೦೩ | ೭,೩೫೯ | ೩೯೨೨ |
| | ಸಾಲಮುಂಗಡಗಳು | ೨೩ | ೧೪೪ | ೮೫೫ | ೮೮೪ | ೧,೩೩೬ | ೨,೧೦೮ | ೪,೦೧೦ | ೭೧೭೯ |
| ಧಾರವಾಡ | ಶಾಖೆಗಳು | ೬೩ | ೨೦೩ | ೩೨೬ | ೩೩೨ | ೩೪೯ | ೨೦೦ | ೨೧೦ | ೩೦೦ |
| | ಠೇವಣಿ | ೧೬ | ೧೧೦ | ೫೬೮ | ೭೭೮ | ೧,೪೧೨ | ೨,೩೬೦ | ೩,೩೫೭ | ೭೨೪೧ |
| | ಸಾಲಮುಂಗಡ | ೬ | ೬೭ | ೩೬೩ | ೪೫೫ | ೭೮೪ | ೧,೨೫೯ | ೨,೯೦೩ | ೫೯೬೭ |
| ಗದಗ | ಶಾಖೆಗಳು | ೧೯೯೭ರಲ್ಲಿ ಈ ಜಿಲ್ಲೆ ಹೊಸದಾಗಿ ರಚನೆಯಾಗಿದೆ | | | | | ೭೯ | ೭೯ | ೧೩೨ |
| | ಠೇವಣಿ | | | | | | ೪೪೦ | ೬೨೨ | ೧೩೯೭ |
| | ಸಾಲಮುಂಗಡಗಳು | | | | | | ೨೬೪ | ೫೬೧ | ೧೦೪೩ |
| ಗುಲಬರ್ಗಾ | ಶಾಖೆಗಳು | ೧೯ | ೧೦೭ | ೧೬೮ | ೧೭೦ | ೧೭೦ | ೧೭೬ | ೧೭೫ | ೨೮೨ |
| | ಠೇವಣಿ | ೪ | ೩೪ | ೨೫೩ | ೩೬೦ | ೭೨೪ | ೧೪೩೪ | ೨೦೫೮ | ೪೦೦೯ |
| | ಸಾಲಮುಂಗಡಗಳು | ೨ | ೧೯ | ೧೮೦ | ೨೧೭ | ೪೧೩ | ೮೦೧ | ೧೫೧೦ | ೪೧೩೬ |
| ಹಾಸನ | ಶಾಖೆಗಳು | ೩೨ | ೮೫ | ೧೫೫ | ೧೫೫ | ೧೬೩ | ೧೬೬ | ೧೬೯ | ೨೨೮ |
| | ಠೇವಣಿ | ೪ | ೪೧ | ೨೧೮ | ೨೯೩ | ೫೭೯ | ೯೭೭ | ೧೪೦೮ | ೨೭೯೮ |
| | ಸಾಲಮುಂಗಡಗಳು | ೩ | ೨೮ | ೧೬೫ | ೧೯೬ | ೩೭೮ | ೭೬೭ | ೧೨೮೫ | ೨೩೫೭ |
| ಹಾವೇರಿ | ಶಾಖೆಗಳು | ೧೯೯೭ರಲ್ಲಿ ಈ ಜಿಲ್ಲೆ ಹೊಸದಾಗಿ ರಚನೆಯಾಗಿದೆ | | | | | ೯೫ | ೯೭ | ೧೬೩ |
| | ಠೇವಣಿ | | | | | | ೪೬೭ | ೭೨೭ | ೧೫೨೩ |
| | ಸಾಲಮುಂಗಡಗಳು | | | | | | ೩೬೩ | ೨೪೯೮ | ೧೨೭೮ |
| ಕೊಡಗು | ಶಾಖೆಗಳು | ೨೭ | ೬೮ | ೧೦೮ | ೧೦೮ | ೧೦೯ | ೧೧೧ | ೧೦೯ | ೧೩೩ |
| | ಠೇವಣಿ | ೬ | ೪೨ | ೧೭೮ | ೨೫೦ | ೫೨೩ | ೭೩೩ | ೯೪೧ | ೧೭೮೬ |
| | ಸಾಲಮುಂಗಡಗಳು | ೩ | ೨೫ | ೧೦೯ | ೧೨೧ | ೨೮೫ | ೬೩೩ | ೮೭೨ | ೧೩೫೦ |
| ಕೋಲಾರ | ಶಾಖೆಗಳು | ೨೦ | ೮೪ | ೧೮೫ | ೧೮೬ | ೧೮೫ | ೧೭೯ | ೧೭೯ | ೧೪೧ |
| | ಠೇವಣಿ | ೩ | ೩೯ | ೨೨೨ | ೩೦೨ | ೫೪೭ | ೧೦೦೬ | ೧೩೯೦ | ೧೭೨೫ |
| | ಸಾಲಮುಂಗಡಗಳು | ೧ | ೨೨ | ೧೬೩ | ೧೮೭ | ೩೫೪ | ೫೬೬ | ೧೧೨೬ | ೧೧೫೧ |
| ಚಿಕ್ಕಬಳ್ಳಾಪುರ | ಶಾಖೆಗಳು | ೧೯೯೭ರಲ್ಲಿ ಈ ಜಿಲ್ಲೆ ಹೊಸದಾಗಿ ರಚನೆಯಾಗಿದೆ | | | | | | | ೧೧೮ |
| | ಠೇವಣಿ | | | | | | | | ೧೦೮೯ |
| | ಸಾಲಮುಂಗಡಗಳು | | | | | | | | ೮೦೫ |
| ಕೊಪ್ಪಳ | ಶಾಖೆಗಳು | ೧೯೯೭ರಲ್ಲಿ ಈ ಜಿಲ್ಲೆ ಹೊಸದಾಗಿ ರಚನೆಯಾಗಿದೆ | | | | | ೭೬ | ೭೯ | ೧೩೬ |
| | ಠೇವಣಿ | | | | | | ೩೮೭ | ೬೧೦ | ೧೨೯೮ |
| | ಸಾಲಮುಂಗಡಗಳು | | | | | | ೪೧೮ | ೧೧೪ | ೧೫೭೩ |

| | | | | | | | | | |
|---|---|---|---|---|---|---|---|---|---|
| ಮಂಡ್ಯ | ಶಾಖೆಗಳು | ೧೬ | ೭೨ | ೧೨೭ | ೧೨೭ | ೧೨೭ | ೧೨೭ | ೧೨೮ | ೧೭೬ |
| | ಠೇವಣಿ | ೨ | ೨೭ | ೧೫೧ | ೧೯೯ | ೩೫೬ | ೬೫೭ | ೯೩೫ | ೧೬೮೫ |
| | ಸಾಲಮುಂಗಡಗಳು | ೧ | ೧೫ | ೧೧೩ | ೧೩೨ | ೨೨೧ | ೪೨೪ | ೮೨೭ | ೧೪೮೧ |
| ಮೈಸೂರು | ಶಾಖೆಗಳು | ೪೮ | ೧೮೯ | ೨೫೧ | ೨೫೭ | ೨೬೬ | ೨೪೨ | ೨೫೭ | ೩೬೬ |
| | ಠೇವಣಿ | ೧೬ | ೧೧೧ | ೬೫೦ | ೮೯೬ | ೧,೭೦೭ | ೩,೦೩೧ | ೪,೬೫೬ | ೧೦೦೧೭ |
| | ಸಾಲಮುಂಗಡಗಳು | ೮ | ೭೯ | ೪೫೮ | ೫೪೫ | ೯೬೯ | ೧,೬೬೦ | ೩,೨೫೨ | ೬೪೮೯ |
| ರಾಯಚೂರು | ಶಾಖೆಗಳು | ೨೬ | ೧೦೧ | ೧೬೧ | ೧೬೨ | ೧೬೩ | ೯೮ | ೧೦೩ | ೧೮೫ |
| | ಠೇವಣಿ | ೩ | ೩೩ | ೨೧೨ | ೨೮೦ | ೫೨೯ | ೬೪೭ | ೯೨೫ | ೨೪೨೪ |
| | ಸಾಲಮುಂಗಡಗಳು | ೩ | ೩೨ | ೧೮೭ | ೨೨೧ | ೪೫೫ | ೬೨೨ | ೧,೧೨೪ | ೨೬೮೦ |
| ಶಿವಮೊಗ್ಗ | ಶಾಖೆಗಳಿ | ೩೬ | ೧೧೧ | ೧೭೫ | ೧೮೦ | ೧೮೧ | ೧೫೭ | ೧೬೦ | ೨೧೧ |
| | ಠೇವಣಿ | ೮ | ೫೩ | ೨೮೮ | ೩೮೦ | ೬೮೦ | ೧,೩೭೬ | ೧,೮೮೨ | ೪೦೧೦ |
| | ಸಾಲಮುಂಗಡಗಳು | ೧೪ | ೫೧ | ೨೭೮ | ೩೧೪ | ೫೨೨ | ೯೮೭ | ೧,೬೩೪ | ೨೭೧೯ |
| ತುಮಕೂರು | ಶಾಖೆಗಳು | ೧೯ | ೮೮ | ೧೭೯ | ೧೮೨ | ೧೮೪ | ೧೮೨ | ೧೭೮ | ೨೪೪ |
| | ಠೇವಣಿ | ೪ | ೩೯ | ೨೪೪ | ೩೨೮ | ೫೬೯ | ೧,೦೭೭ | ೧,೫೦೫ | ೨೯೯೫ |
| | ಸಾಲಮುಂಗಡ | ೧ | ೨೩ | ೧೫೪ | ೧೯೩ | ೩೧೫ | ೬೪೦ | ೧,೨೮೨ | ೨೬೪೨ |
| ಉಡುಪಿ | ಶಾಖೆಗಳು | ೧೯೯೭ರಲ್ಲಿ ಈ ಜಿಲ್ಲೆ ಹೊಸದಾಗಿ ರಚನೆಯಾಗಿದೆ | | | | | ೨೦೪ | ೨೧೭ | ೨೫೨ |
| | ಠೇವಣಿ | | | | | | ೩,೨೬೨ | ೪,೦೬೮ | ೭೮೨೯ |
| | ಸಾಲಮುಂಗಡಗಳು | | | | | | ೮೨೮ | ೧,೬೨೦ | ೩೨೭೯ |
| ಉತ್ತರ ಕನ್ನಡ | ಶಾಖೆಗಳು | ೩೪ | ೧೦೫ | ೧೫೭ | ೧೫೮ | ೧೬೪ | ೧೬೮ | ೧೭೩ | ೨೨೨ |
| | ಠೇವಣಿ | ೭ | ೪೮ | ೨೫೩ | ೩೪೦ | ೬೩೦ | ೧,೪೭೦ | ೧,೯೩೮ | ೩೭೬೪ |
| | ಸಾಲಮುಂಗಡಗಳು | ೨ | ೨೦ | ೧೧೩ | ೧೨೮ | ೨೪೦ | ೪೨೨ | ೭೮೩ | ೧೨೭೮ |
| ಕರ್ನಾಟಕ ರಾಜ್ಯದ ಒಟ್ಟು | ಶಾಖೆಗಳು | ೮೫೧ | ೨,೭೫೦ | ೪,೩೦೦ | ೪,೩೬೪ | ೪,೫೭೨ | ೪,೭೭೨ | ೫,೦೦೨ | ೭೨೪೭ |
| | ಠೇವಣಿ | ೨೫೫ | ೧,೯೩೪ | ೧೧,೨೧೬ | ೧೫,೨೯೮ | ೩೧,೮೮೨ | ೭೫,೩೯೮ | ೧,೩೪,೬೯೮ | ೨,೮೧,೬೫೫ |
| | ಸಾಲಮುಂಗಡಗಳು | ೧೮೬ | ೧,೪೬೦ | ೮,೭೯೩ | ೧೦,೭೨೮ | ೨೧,೭೫೩ | ೪೫,೯೧೯ | ೧,೦೩,೪೫೬ | ೨,೨೪,೩೨೫ |

ಮೂಲ: ೧. ಪಿಗ್ಮಿ ಎಕನಾಮಿಕ್ ರಿವ್ಯೂ ಫೆಬ್ರವರಿ ೧೯೮೪ ಸಿಂಡಿಕೇಟ್ ಬ್ಯಾಂಕ್.
೨. ಕರ್ನಾಟಕ ಅಟ್ ಎ ಗ್ಲಾನ್ಸ್ – ೧೯೯೦–೯೧, ೧೯೯೩–೯೪, ೧೯೯೭–೯೮, ೨೦೦೩, ೨೦೦೬, ೨೦೧೧ ಅಂಕಿ ಅಂಶಗಳ ನಿರ್ದೇಶನಾಲಯ, ಬೆಂಗಳೂರು.

ವಿ.ಸೂ. ಠೇವಣಿ ಮತ್ತು ಸಾಲ ಮುಂಗಡಗಳನ್ನು ಸೂಚಿಸುವ ಅಂಕಿಗಳನ್ನು ಸಮೀಪದ ಕೋಟಿರೂಪಾಯಿಗೆ ಪರಿವರ್ತನೆ ಸೂಚಿಸಲಾಗಿದೆ. ಆದ್ದರಿಂದ ಒಟ್ಟು ಜಿಲ್ಲಾ ಹಾಗೂ ರಾಜ್ಯದ ಒಟ್ಟು ಅಂಕಿ ಅಂಶಗಳಲ್ಲಿ ವ್ಯತ್ಯಾಸವಿದೆ.

* ೧೯೮೬ ರಲ್ಲಿ ಬೆಂಗಳೂರು ಜಿಲ್ಲೆಯನ್ನು, ಬೆಂಗಳೂರು ಗ್ರಾಮೀಣ ಮತ್ತು ಬೆಂಗಳೂರು ಎಂದು ವಿಭಾಗಿಸಲಾಯಿತು. ಅದರಂತೆ ಮೈಸೂರು ಧಾರವಾಡ, ದಕ್ಷಿಣ ಕನ್ನಡ, ಚಿತ್ರದುರ್ಗ, ರಾಯಚೂರು ಜಿಲ್ಲೆಗಳನ್ನು ೧೯೭೭ರಲ್ಲಿ ವಿಭಜಿಸಲಾಯಿತು. ಮುಂದುವರೆದು ೨೦೦೭ರಲ್ಲಿ ಬೆಂಗಳೂರು ಗ್ರಾಮೀಣ ಮತ್ತು ಕೋಲಾರ ಜಿಲ್ಲೆಗಳನ್ನು ವಿಭಜಿಸಿ ರಾಮನಗರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳನ್ನು ರಚಿಸಲಾಯಿತು. ಆದ್ದರಿಂದ ಹೊಸದಾಗಿ ರಚನೆಗೊಂಡ ಜಿಲ್ಲೆಗಳ ಪ್ರತ್ಯೇಕವಾದ ಅಂಕಿ ಅಂಶಗಳು ಲಭ್ಯವಿಲ್ಲದೇ ಇರುವುದರಿಂದ ನೀಡಲು ಸಾಧ್ಯವಾಗಿಲ್ಲ. ಅಲ್ಲದೇ ಇತ್ತೀಚೆಗೆ ೨೦೦೯ ಡಿಸೆಂಬರ್‌ನಲ್ಲಿ ಗುಲಬರ್ಗಾ ಜಿಲ್ಲೆಯನ್ನು ವಿಭಜಿಸಿ ಯಾದಗಿರಿ ಜಿಲ್ಲೆಯನ್ನು ನೂತನವಾಗಿ ರಚಿಸಲಾಗಿದೆ.

## ಪ್ರಮುಖ ಬ್ಯಾಂಕು ಹಾಗೂ ಶಾಖೆಗಳು

ಭಾರತೀಯ ರಿಜರ್ವ್ ಬ್ಯಾಂಕಿನ ೨೦೧೦–೧೧ರ ವರದಿಯ ಪ್ರಕಾರ ಕರ್ನಾಟಕದಲ್ಲಿ ೨೨೪೬ ಬ್ಯಾಂಕಿಂಗ್ ಸೇವಾ ಕೇಂದ್ರಗಳಿದ್ದು, ಆ ಪೈಕಿ ಗ್ರಾಮೀಣ (೧೦೦೦೦ ವರೆಗಿನ ಜನ ಸಂಖ್ಯೆ) ಪ್ರದೇಶದ ೧೯೨೫ ಕೇಂದ್ರಗಳಲ್ಲಿ ೨೨೧೨ ಬ್ಯಾಂಕುಗಳು, ಅರೆ ಪಟ್ಟಣ (೧೦೦೦೦ ರಿಂದ ೧೦೦೦೦೦ ಜನಸಂಖ್ಯೆ) ಪ್ರದೇಶದ ೨೯೭ ಕೇಂದ್ರಗಳಲ್ಲಿ ೧೩೭೫ ಬ್ಯಾಂಕುಗಳು, ಪಟ್ಟಣ (೧೦೦೦೦೦ ದಿಂದ ೧೦,೦೦,೦೦೦ ಜನಸಂಖ್ಯೆ) ಪ್ರದೇಶದ ೨೩ ಕೇಂದ್ರಗಳಲ್ಲಿ ೧೪೫೭ ಬ್ಯಾಂಕುಗಳು, ಮೆಟ್ರೋಪಾಲಿಟನ್ (೧೦,೦೦,೦೦೦ ಮೇಲ್ಪಟ್ಟು ಜನಸಂಖ್ಯೆ) ಪ್ರದೇಶದ ಒಂದು ಕೇಂದ್ರದಲ್ಲಿ ೧೫೭೩, ಬ್ಯಾಂಕುಗಳು ಕಾರ್ಯ ನಿರ್ವಹಿಸುತ್ತಿದ್ದವು. ಭಾರತೀಯ ರಿಜರ್ವ ಬ್ಯಾಂಕಿನ ವರದಿಯ ಪ್ರಕಾರ ದೇಶದ ಪ್ರಮುಖ ೨೦೦ ಬ್ಯಾಂಕಿಂಗ್ ಕೇಂದ್ರಗಳ ಪೈಕಿ ರಾಜ್ಯದ  ಪ್ರಮುಖ ನಗರಗಳ ಸ್ಥಾನ ಈ ಕೆಳಕಂಡಂತಿತ್ತು.

| ಠೇವಣಿ | | | | | ಸಾಲ ಮುಂಗಡಗಳು | | | | |
|---|---|---|---|---|---|---|---|---|---|
| ಆರ್ ಬಿ ಐ ವರದಿಯಲ್ಲಿನ ಸ್ಥಾನ | ಕೇಂದ್ರದ ಹೆಸರು | ಬ್ಯಾಂಕುಗಳ ಸಂಖ್ಯೆ | ಮೊತ್ತ ಕೋಟಿಗಳಲ್ಲಿ | ವಾರ್ಷಿಕ ಅಭಿವೃದ್ಧಿ ದರ ಶೇ. | ಆರ್ ಬಿ ಐ ವರದಿಯಲ್ಲಿನ ಸ್ಥಾನ | ಕೇಂದ್ರದ ಹೆಸರು | ಬ್ಯಾಂಕುಗಳ ಸಂಖ್ಯೆ | ಮೊತ್ತ ಕೋಟಿಗಳಲ್ಲಿ | ವಾರ್ಷಿಕ ಅಭಿವೃದ್ಧಿ ದರ ಶೇ. |
| ೩ | ಬೆಂಗಳೂರು | ೧೪೬೮ | ೨,೨೮,೩೫೮ | ೨೦.೯ | ೫ | ಬೆಂಗಳೂರು | ೧,೪೬೮ | ೧,೬೬,೫೩೮ | ೧೨.೯ |
| ೩೮ | ಮಂಗಳೂರು | ೧೯೬ | ೧೨,೫೨೬ | ೨೦.೯ | ೪೨ | ಮಂಗಳೂರು | ೧೯೫ | ೬,೧೮೫ | ೨೧.೦ |
| ೪೬ | ಮೈಸೂರು | ೧೯೫ | ೯,೮೯೪ | ೧೬.೯ | ೪೩ | ಮೈಸೂರು | ೧೯೬ | ೬,೧೫೫ | ೧೯.೨ |
| ೫೮ | ಹುಬ್ಬಳ್ಳಿ–ಧಾರವಾಡ | ೧೭೩ | ೭,೫೭೮ | ೨೦.೫ | ೪೮ | ಹುಬ್ಬಳ್ಳಿ–ಧಾರವಾಡ | ೧೭೩ | ೫,೫೯೫ | ೧೦.೪ |
| ೭೮ | ಬೆಳಗಾವಿ | ೧೨೦ | ೫,೪೬೪ | ೧೨.೯ | ೭೯ | ಬೆಳಗಾವಿ | ೧೨೦ | ೩,೨೦೩ | ೨೨.೧ |
| ೧೦೬ | ಉಡುಪಿ | ೫೯ | ೩,೭೩೪ | ೧೨.೬ | ೮೫ | ಬಳ್ಳಾರಿ | ೫೨ | ೨,೯೯೧ | ೨.೯ |
| ೧೨೮ | ಬಳ್ಳಾರಿ | ೫೨ | ೨,೯೮೧ | (–)೧೦.೯ | ೧೦೯ | ಗುಲಬರ್ಗಾ | ೬೨ | ೧,೯೩೨ | (–)೩.೬ |
| ೧೩೭ | ಗುಲಬರ್ಗಾ | ೬೨ | ೨,೭೯೩ | ೨೩.೮ | ೧೧೩ | ಉಡುಪಿ | ೫೯ | ೧,೮೫೧ | ೧೯.೦ |
| ೧೫೨ | ಸಾಗರ | ೪೮ | ೨,೪೭೨ | ೨೧.೪ | ೧೨೪ | ಹೊಸಪೇಟೆ | ೩೪ | ೧,೬೩೨ | ೮.೫ |
| ೧೭೨ | ಶಿವಮೊಗ್ಗ | ೫೬ | ೨,೧೯೮ | ೧೭.೮ | ೧೩೬ | ದಾವಣಗೆರೆ | ೪೫ | ೧,೪೯೭ | ೧೪.೫ |
| | | | | | ೧೫೪ | ಶಿವಮೊಗ್ಗ | ೫೬ | ೧,೨೭೭ | ೧೩.೭ |
| | | | | | ೧೭೪ | ಬಿಜಾಪುರ | ೩೮ | ೧,೧೩೮ | ೯.೪ |
| | | | | | ೧೭೭ | ತುಮಕೂರು | ೫೧ | ೧,೦೯೭ | ೧೨.೩ |
| | | | | | ೧೮೦ | ಬಾಗಲಕೋಟೆ | ೨೬ | ೧,೦೮೨ | ೨೭.೪ |
| ರಾಷ್ಟ್ರೀಯ ಮಟ್ಟದ ಅಭಿವೃದ್ಧಿ ದರ ಶೇ: | | | | ೧೮.೩ | ರಾಷ್ಟ್ರೀಯ  ಮಟ್ಟದ ಅಭಿವೃದ್ಧಿ ದರ ಶೇ: | | | | ೨೦.೩ |

ಭಾರತೀಯ ರಿಜರ್ವ್ ಬ್ಯಾಂಕ್‌ನ ಜೂನ್ ೨೦೧೧ ರವರೆಗಿನ ತ್ರೈಮಾಸಿಕ ವರದಿಯ ಪ್ರಕಾರ ರಾಜ್ಯದಲ್ಲಿಯ ವಾಣಿಜ್ಯ ಬ್ಯಾಂಕುಗಳ ಠೇವಣಿ ಹಾಗೂ ಸಾಲ ನೀಡಿಕೆ ವಿವರ ಈ ಕೆಳಗಿನಂತಿದೆ.

| ಕ್ರ. ಸಂ | ಬ್ಯಾಂಕು | ಕಚೇರಿಗಳ ದಾಖಲಾತಿ | ಠೇವಣಿ ಕೋಟಿಗಳಲ್ಲಿ | ಸಾಲ ನೀಡಿಕೆ ಕೋಟಿಗಳಲ್ಲಿ |
|---|---|---|---|---|
| ೧ | ಭಾರತೀಯ ಸ್ಟೇಟ್ ಬ್ಯಾಂಕ್ ಮತ್ತು ಅದರ ಸಹವರ್ತಿ ಬ್ಯಾಂಕುಗಳು | ೧೨೧೯ | ೭೭,೭೨೯ | ೬೧,೫೭೬ |
| ೨ | ರಾಷ್ಟ್ರೀಯ ಬ್ಯಾಂಕುಗಳು ( Nationalised Banks) | ೨೯೪೬ | ೧,೬೯,೧೧೨ | ೧,೨೨,೫೪೪ |
| ೩ | ವಿದೇಶಿ ಬ್ಯಾಂಕುಗಳು | ೧೬ | ೨೧,೬೩೬ | ೧೬,೨೩೫ |
| ೪ | ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು | ೧೨೧೫ | ೧೩,೧೩೭ | ೧೧,೦೩೮ |
| ೫ | ಹಳೆಯ ಖಾಸಗಿ ವಲಯ ಬ್ಯಾಂಕುಗಳು (Old Private Sector Banks) | ೬೦೭ | ೩೧,೧೬೯ | ೧೭,೯೦೪ |
| ೬ | ಹೊಸ ಖಾಸಗಿ ವಲಯ ಬ್ಯಾಂಕುಗಳು ( New Private Sector Banks) | ೩೭೫ | ೩೬,೮೯೧ | ೨೨,೧೪೭ |

೨೦೧೧ರ ಮಾರ್ಚ್ ಕೊನೆಯಲ್ಲಿ ರಾಜ್ಯದಲ್ಲಿ ೬೭ ವಿವಿಧ ಬ್ಯಾಂಕಿಂಗ್ ಕಂಪನಿಗಳೂ ಒಟ್ಟಾರೆ ೬,೬೧೭ ಶಾಖೆಗಳನ್ನು ಹೊಂದಿದ್ದವು. ಅವುಗಳಲ್ಲಿ ಕೆನರಾ ಬ್ಯಾಂಕ್ ೬೪೯ ಶಾಖೆಗಳೊಂದಿಗೆ ಮೊದಲನೆಯ ಸ್ಥಾನದಲ್ಲಿದ್ದು, ನಂತರದ ಮಾಲಿಕೆಯಲ್ಲಿ ಸಿಂಡಿಕೇಟ್ ಬ್ಯಾಂಕ್ (೬೨೮); ಸ್ಟೇಟ್ ಬ್ಯಾಂಕ್ ಆಫ್ ಮೈಸೂರು (೫೯೪); ವಿಜಯ ಬ್ಯಾಂಕ್ (೪೮೫); ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ (೪೫೦); ಪ್ರಗತಿ ಗ್ರಾಮೀಣ ಬ್ಯಾಂಕ್ (೩೭೪); ಭಾರತೀಯ ಸ್ಟೇಟ್ ಬ್ಯಾಂಕ್ (೫೦೫); ಕಾರ್ಪೊರೇಷನ್ ಬ್ಯಾಂಕ್ (೩೪೬); ಕರ್ನಾಟಕ ಬ್ಯಾಂಕ್ (೩೦೨) ಕಾವೇರಿ ಕಲ್ಪತರು ಗ್ರಾಮೀಣ ಬ್ಯಾಂಕ್ (೨೧೭), ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್ (೧೪೦); ಕೃಷ್ಣಾ ಗ್ರಾಮೀಣ ಬ್ಯಾಂಕ್ (೧೧೫); ಐ.ಎನ್.ಜಿ.ವೈಶ್ಯ ಬ್ಯಾಂಕ್ (೧೧೯); ಇಂಡಿಯನ್ ಓವರ್ಸೀಸ್ ಬ್ಯಾಂಕ್ (೯೭); ಯೂನಿಯನ್ ಬ್ಯಾಂಕ್ ಆಫ್ ಇಂಡಿಯ (೧೩೬); ಇಂಡಿಯನ್ ಬ್ಯಾಂಕ್ (೮೬); ಬ್ಯಾಂಕ್ ಆಫ್ ಇಂಡಿಯ (೯೨); ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯ (೯೭); ಮತ್ತು ವೈ.ಇ.ಎಸ್. ಬ್ಯಾಂಕ್ ಐದು ಶಾಖೆಯನ್ನು ಹೊಂದಿದ್ದವು.

## ರಾಜ್ಯದ ಅವಧಿ ಸಾಲ ನೀಡಿಕೆ ಸಂಸ್ಥೆಗಳು

ವಾಣಿಜ್ಯ ಬ್ಯಾಂಕುಗಳು, ಆರ್‌ಆರ್‌ಬಿ ಮತ್ತು ಸಹಕಾರಿ ಬ್ಯಾಂಕುಗಳ ಜೊತೆಗೆ ಇತರೆ ಹಣಕಾಸು ಸಂಸ್ಥೆಗಳು ಸಹಾ ಬೇರೆ ಬೇರೆ ಚಟುವಟಿಕೆಗಳಿಗೆ ಅವಧಿ ಸಾಲದ ಸೌಲಭ್ಯವನ್ನು ಒದಗಿಸುತ್ತಿದ್ದು, ರಾಜ್ಯದಲ್ಲಿ ಪ್ರಧಾನ ಅವಧಿ ಸಾಲ ನೀಡಿಕೆಯ ಹಣಕಾಸು ಸಂಸ್ಥೆಗಳಾದ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ (ಕೆ.ಎಸ್.ಎಫ್.ಸಿ) ರಾಜ್ಯದಲ್ಲಿಯ ಸಣ್ಣ ಮತ್ತು ಮಧ್ಯಮ ಉದ್ಯಮಗಳ ಹಾಗೂ ಸೇವಾ ವಲಯಗಳ ಅಭಿವೃದ್ಧಿ, ನಿರ್ಮಾಣ ಚಟುವಟಿಕೆ ಮೂಲಭೂತ ಸೌಕರ್ಯ ಅಭಿವೃದ್ಧಿ, ಪ್ರವಾಸೋದ್ಯಮ, ಆರೋಗ್ಯ ರಕ್ಷಣೆ, ಜವಳಿ, ಜೀವವಿಮೆ, ಆಹಾರ ಸಂಸ್ಕರಣೆ, ಇಂಜಿನಿಯರಿಂಗ್ ಮುಂತಾದ ಕ್ಷೇತ್ರಗಳ ಅಭಿವೃದ್ಧಿಯಲ್ಲಿ ಹಾಗೂ ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಹೂಡಿಕೆ ಮತ್ತು ಅಭಿವೃದ್ಧಿ ನಿಗಮವು (ಕೆ.ಎಸ್.ಐ.ಐ.ಡಿ.ಸಿ) ಮಧ್ಯಮ ಮತ್ತು ಬೃಹತ್ ಕೈಗಾರಿಕೆಗಳ ಅಭಿವೃದ್ಧಿ ದಿಶೆಯಲ್ಲಿ ಕಾರ್ಯ ನಿರತವಾಗಿವೆ. ರಾಜ್ಯದಲ್ಲಿ ಮೂಲಭೂತ ಸೌಲಭ್ಯ ಒದಗಿಸುವ ಯೋಜನೆಗಳ ತಯಾರಿಕೆ ಹಾಗೂ ಕಾರ್ಯಗತಗೊಳಿಸುವ ವಿಷಯದಲ್ಲಿ

ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಹೂಡಿಕೆ ಮತ್ತು ಅಭಿವೃದ್ಧಿ ನಿಗಮವು ನೋಡಲ್ ಏಜನ್ಸಿಯಾಗಿ ಕಾರ್ಯ ನಿರ್ವಹಿಸುತ್ತಿದೆ. ಈ ಸಂಸ್ಥೆಗಳು ೨೦೦೮-೦೯, ೨೦೦೯-೧೦, ೨೦೧೦-೧೧ನೇ ಸಾಲಿನಲ್ಲಿ ನೀಡಿದ ಸಹಾಯ ಧನದ ವಿವರ ಈ ಕೆಳಗಿನಂತಿದೆ. (₹ ಕೋಟಿಗಳಲ್ಲಿ)

| ಸಂಸ್ಥೆ | ೨೦೦೮-೦೯ | | ೨೦೦೯-೧೦ | | ೨೦೧೦-೧೧ | |
|---|---|---|---|---|---|---|
| | ಮಂಜೂರಾತಿ | ವಿತರಣೆಗಳು | ಮಂಜೂರಾತಿ | ವಿತರಣೆಗಳು | ಮಂಜೂರಾತಿ | ವಿತರಣೆಗಳು |
| ಕೆ.ಎಸ್.ಎಫ.ಸಿ | ೫೬೫.೨೪ | ೩೮೩.೯೨ | ೬೬೩೧.೪೯ | ೪೩೪.೩೯ | ೭೩೧.೬೩ | ೫೮೦.೪೧ |
| ಕೆ.ಎಸ್.ಐ.ಐ.ಡಿ.ಸಿ | ೨.೬೫ | ೭.೫೩ | ೪.೯೦ | ೩.೨೫ | ೦.೦೦ | ೪.೧೬ |

## ಸಹಕಾರ ಚಳವಳಿ

ಕರ್ನಾಟಕದಲ್ಲಿ ಸಹಕಾರ ಚಳವಳಿಯು ನಡೆದುಬಂದ ಇತಿಹಾಸ ಅತ್ಯಂತ ರೋಚಕವಾಗಿದ್ದು, ಆರಂಭದಿಂದಲೂ (೧೯೦೪) ಚಳವಳಿಯು ಆಳವಾಗಿ ಮತ್ತು ವ್ಯಾಪಕವಾಗಿ ಹರಡಿಕೊಂಡಿದ್ದು, ಸಹಕಾರ ಸಂಸ್ಕೃತಿಯನ್ನು ಈ ನಾಡಿನ ಅನೇಕ ಆರ್ಥಿಕ, ವಾಣಿಜ್ಯಕ ಸಾಮಾಜಿಕ ಚಟುವಟಿಕೆಗಳಲ್ಲಿ ಕಾಣಬಹುದು. ದೇಶದಲ್ಲಿಯೇ ಪ್ರಪ್ರಥಮ ಪ್ರಾಥಮಿಕ ವ್ಯವಸಾಯ ಪತ್ತಿನ ಸಹಕಾರ ಸಂಘವು ಮೇ ೮, ೧೯೦೫ ರಂದು ನಮ್ಮ ರಾಜ್ಯದ ಇಂದಿನ ಗದಗ ಜಿಲ್ಲೆಯ ಕಣಗಿನಹಾಳದಲ್ಲಿ (ಗದಗಿನಿಂದ ಸುಮಾರು ೧೮ ಕಿ.ಮಿ.) ಸ್ಥಾಪಿಸಲ್ಪಟ್ಟಿತು. ಇದು ಇಂದಿಗೂ ಕಾರ್ಯ ನಿರ್ವಹಿಸುತ್ತಿದೆ. ಅದರಂತೆ ಪಟ್ಟಣ ಸಹಕಾರಿ ಸಂಘಗಳಲ್ಲೂ (ಅರ್ಬನ್ ಕ್ರೆಡಿಟ್) ಪ್ರಪ್ರಥಮವಾಗಿ ಆರಂಭವಾದದ್ದು ಸಹ ಇಂದು ಗದಗ ನಗರದ ಭಾಗವಾಗಿರುವ ಬೆಟಗೇರಿಯಲ್ಲಿ ದಿನಾಂಕ ೧೮.೧೦.೧೯೦೫ ರಂದು (ಈಗ ಇದು ಕಾರ್ಯ ನಿರ್ವಹಿಸುತ್ತಿಲ್ಲ). ೧೯೦೫ರಲ್ಲಿ ಆರಂಭಗೊಂಡ ಸ್ವದೇಶಿ ಚಳವಳಿಯಿಂದಾಗಿ ಅನೇಕ ಸ್ಥಳೀಯ ನಾಯಕರು ಮತ್ತು ಸಾಮಾಜಿಕ ಕಾರ್ಯಕರ್ತರು ಸ್ಥಳೀಯ ಜನರ ಬೇಡಿಕೆಗೆ ಸ್ಪಂದಿಸಲು ಪೂರಕವಾಗಿ ಸಹಕಾರ ವಲಯವನ್ನು ಆಯ್ಕೆ ಮಾಡಿಕೊಂಡು ಅನೇಕ ಸಹಕಾರಿ ಸಂಘಗಳನ್ನು ಸ್ಥಾಪಿಸಲು ಮುಂದಾದರು. ೧೯೦೫ ಡಿಸೆಂಬರ ತಿಂಗಳಲ್ಲಿ ಆರಂಭಗೊಂಡ ಬೆಂಗಳೂರು ಸಿಟಿ ಕನ್ಸೂಮರ್ಸ್ ಸೊಸೈಟಿ (ಹೊಸ ತರಗು ಪೇಟೆ, ಪ್ರಕಾಶ ಕೆಫೆ ಎದುರು)ಯನ್ನು ಬೆಂಗಳೂರು ನಗರದ ಮತ್ತು ಮೈಸೂರು ಸಂಸ್ಥಾನದ ಪ್ರಥಮ ಸಹಕಾರ ಸಂಘ ಎಂದು ಹೇಳಲಾಗುತ್ತದೆ. ಕ್ರಮೇಣ ೧೯೦೬ರ ಸುಮಾರಿಗೆ ರಾಜ್ಯದ ಪ್ರಮುಖ ನಗರಗಳಾದ ಬೆಳಗಾವಿ, ಗೋಕಾಕ, ಮೈಸೂರು, ಹುಬ್ಬಳ್ಳಿ-ಧಾರವಾಡ, ಸಿರಾ ಮುಂತಾದ ನಗರಗಳಲ್ಲಿ ಅರ್ಬನ್ ಕ್ರೆಡಿಟ್ ಸೊಸೈಟಿ/ಬ್ಯಾಂಕುಗಳು ಆರಂಭಗೊಂಡವು.

ಮಾದರಿ ಮೈಸೂರು ಸಂಸ್ಥಾನದಲ್ಲಿ ವಿಶೇಷವಾದ, ಹೊಸತಳಿಯ 'ವ್ಯವಸಾಯ ಬ್ಯಾಂಕು' ಗಳನ್ನು ಸರ್ಕಾರದ ಪ್ರಾಯೋಜಕತ್ವದಲ್ಲಿ ಪ್ರಾಯೋಗಿಕವಾಗಿಯೇ ದೇಶಾದ್ಯಂತ ಸಹಕಾರ ಚಳವಳಿ ಆರಂಭಗೊಳ್ಳುವ, ಒಂದು ದಶಕಕ್ಕೂ ಪೂರ್ವದಲ್ಲೇ (೧೮೯೪) ಆರಂಭಿಸಲಾಯಿತು. ಈ ಬ್ಯಾಂಕುಗಳ ರಚನೆಯಲ್ಲಿ ಕಂಪನಿಯ ರಚನಾ ಮಾದರಿಯ ಸೀಮಿತ ಗ್ಯಾರಂಟಿ (Limited Guarantee) ಅನುಸರಿಸಿದ್ದರೂ ಇವುಗಳ ಕಾರ್ಯ ವಿಧಾನ (Modus Operandi), ನೀತಿ ನಿರೂಪಣೆ, ಉದ್ದೇಶ, ಸಹಕಾರಿ ತತ್ವಗಳನ್ನು ಒಳಗೊಂಡಿದ್ದು ಒಂದು ವಿಶೇಷವಾಗಿತ್ತು. ಬಡರೈತರ ವ್ಯವಸಾಯ ಅಭಿವೃದ್ಧಿಗೆ ಅತ್ಯಂತ ಸಹಾಯಕವಾಗಿದ್ದ ಮತ್ತು ಸಾಹುಕಾರರ ಶೋಷಣೆಯಿಂದ ಬಡರೈತರನ್ನು ದೂರಮಾಡುವ ಉದ್ದೇಶದಿಂದ ಆರಂಭಗೊಂಡ ಈ ಹೊಸ ವ್ಯವಸ್ಥೆಯನ್ನು ಯುರೋಪ್ ಮತ್ತು ಅಮೇರಿಕದ ರಾಜಕೀಯ ಮತ್ತು ಆರ್ಥಿಕ ಪಂಡಿತರು ಬಹುವಾಗಿ ಮೆಚ್ಚಿಕೊಂಡಿದ್ದರು ಎಂಬುದು ದಾಖಲೆಗಳಿಂದ ತಿಳಿದು ಬರುತ್ತದೆ. ೧೯೧೨ರಲ್ಲಿ ತಿದ್ದುಪಡಿಯಾದ ಸಹಕಾರಿ ಕಾನೂನಿನನ್ವಯ ಸಹಕಾರ ವಲಯದಲ್ಲಿ ಬಹಳಷ್ಟು ಬದಲಾವಣೆಗಳುಂಟಾದವು. ಅದುವರೆಗೆ

ಕೇವಲ ವ್ಯವಸಾಯ ಪತ್ತಿಗೆ ಸೀಮಿತವಾಗಿದ್ದ ಆಂದೋಲನ ವ್ಯವಸಾಯೇತರ ಮತ್ತು ಸಾಲೇತರ ಸಹಕಾರ ಸಂಘಗಳ ರಚನೆಗೆ ಅವಕಾಶ ಮಾಡಿಕೊಟ್ಟಿತು. ಇದರಿಂದ ರಾಜ್ಯಾದ್ಯಂತ ಇಂತಹ ಸಹಕಾರ ಸಂಘಗಳು ಮೂಡಿಬಂದವು. ಆರಂಭದ ಹಂತದಲ್ಲಿ, ಬೋಂಬಾಯಿ ಸರ್ಕಾರ ಮತ್ತು ಮೈಸೂರಿನ ಪ್ರಾಂತೀಯ ಸರ್ಕಾರಗಳು ಸಹಕಾರ ಚಳವಳಿಯ ಮುನ್ನಡೆಗೆ ಪೂರಕವಾಗುವಂತೆ ವಿಶೇಷ ಪ್ರೋತ್ಸಾಹದಾಯಕ ಕ್ರಮಗಳನ್ನು ರೂಪಿಸಿದವು. ಅಲ್ಲದೆ, ಗ್ರಾಮೀಣ ಪ್ರದೇಶಗಳಲ್ಲಿ ಸಹಕಾರ ಸಂಘಗಳ ರಚನೆ, ಮಾರ್ಗದರ್ಶನಕ್ಕೆ ಸಹಾಯಕವಾಗುವಂತೆ ಗೌರವ ಮೇಲ್ವಿಚಾರಕರನ್ನು ನೇಮಕ ಮಾಡಲಾಯಿತು.

ಸ್ಥಳೀಯ ವ್ಯವಸಾಯ ವಲಯದ ಅವಶ್ಯಕತೆಗಳನ್ನು ಸಹಕಾರಿ ವಲಯದಲ್ಲಿ ಪೂರೈಸಲು ಸಹಾಯಕವಾಗುವಂತೆ ಬಹಳ ಹಿಂದೆಯೇ ಸಹಕಾರಿವಲಯದಲ್ಲೂ ಜನಾವಶ್ಯಕವಾದ ಆರ್ಥಿಕ ಚಟುವಟಿಕೆಗಳು ಅಂದರೆ ಗದ್ದೆಗಳಿಗೆ ಬೇಲಿಹಾಕುವದು; ಕಾಡುಮೃಗಗಳ ಬೇಟೆಯಾಡುವದು; ಒಡ್ಡುಗಳ ನಿರ್ಮಾಣ, ಪಶುಪಾಲನೆ, ವಿಮೆ, ವ್ಯವಸಾಯ, ಧಾನ್ಯದ ಬ್ಯಾಂಕುಗಳ ಸ್ಥಾಪನೆ, ಮೀನುಗಾರಿಕೆ ಸಹಕಾರಿ ಸಂಘಗಳು, ಅರಣ್ಯ ಕೂಲಿಕಾರರು, ವಸ್ತುಗಳ ಮಾರಾಟ, ಶಿಕ್ಷಣ, ನೀರಾವರಿ, ಗೃಹ ನಿರ್ಮಾಣ, ಗ್ರಾಹಕರ ಸಹಕಾರಿ ಸಂಘ, ಮುಂತಾದ ಸಹಕಾರಿ ಸಂಘಗಳು ಆರಂಭದಲ್ಲಿಯೇ ಮೂಡಿಬಂದುದು ತುಂಬಾ ಕುತೂಹಲಕಾರಿಯಾದ ವಿಷಯ. ಬೊಂಬಾಯಿ ಕರ್ನಾಟಕ ಪ್ರದೇಶದಲ್ಲಿ ೧೯೨೦-೩೦ರ ದಶಕದಲ್ಲಿ ತಾಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಸಹಕಾರ ಸಮ್ಮೇಳನಗಳನ್ನು ಏರ್ಪಡಿಸುವ ಮೂಲಕ ಸಹಕಾರ ಚಳವಳಿಯನ್ನು ಗ್ರಾಮೀಣ ಪ್ರದೇಶಗಳಿಗೆ ಪ್ರಚಾರ ಪಡಿಸುವುದು ಒಂದು ನಿಯಮಿತ ಕಾರ್ಯ ಯೋಜನೆಯಾಗಿತ್ತು. ಗ್ರಾಮೀಣ ಪ್ರದೇಶಗಳಲ್ಲಿ ಸಹಕಾರ ಚಳವಳಿಯ ಉದ್ದೇಶಗಳನ್ನು ವ್ಯಾಪಕವಾಗಿ ಸಮುದಾಯಕ್ಕೆ ತಲುಪಿಸುವ ಸಲುವಾಗಿಯೇ ಧಾರವಾಡ ಜಿಲ್ಲೆಯ ಅಮ್ಮಿನಬಾವಿಯಲ್ಲಿ(ಧಾರವಾಡ ತಾಲೂಕು) ಒಂದು ಸಹಕಾರ ನಾಟಕ ಕಂಪನಿ(ಮಂಡಳಿ) ಇದ್ದುದಾಗಿ ತಿಳಿದು ಬರುತ್ತದೆ.

ಅನೇಕ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಅದರಲ್ಲೂ ವಿಶೇಷವಾಗಿ ಧಾರವಾಡ, ಮಡಿಕೇರಿ ಮತ್ತು ಸಿರ್ಸಿ ಪಟ್ಟಣಗಳಲ್ಲಿದ್ದ ಈ ಬ್ಯಾಂಕುಗಳು ೧೯೨೯-೩೦ರ ಆರ್ಥಿಕ ಹಿಂಜರಿತ ಅವಧಿಯಲ್ಲಿ ಸಹಕಾರ ಚಳವಳಿಗೆ ಹಿನ್ನಡೆ ಉಂಟಾದ ಸಂದರ್ಭದಲ್ಲಿ ಸಂಕಷ್ಟದಲ್ಲಿದ್ದ ರೈತರು ಹಳೆಯ ಸಾಲಗಳನ್ನು ತೀರಿಸಲು ಅಸಹಾಯಕರಾದ ಸಂದರ್ಭದಲ್ಲಿ, ಈ ಬ್ಯಾಂಕುಗಳು ರೈತರು ಸಾಲಕ್ಕೆ ಅಡಮಾನ ಮಾಡಿದ್ದ ಜಮೀನುಗಳನ್ನು ತಾವೇ ಕೊಂಡುಕೊಂಡು ಸುಸ್ತಿ ಸಾಲ (ಸಾಲದ ಬಾಕಿ) ತೀರಿಸಿದ ನಂತರ ಅವರವರ ಜಮೀನುಗಳನ್ನು ಕೊಂಡಬೆಲೆಗೆ ಸಾಲಗಾರ ರೈತರಿಗೆ ಹಿಂದಕ್ಕೆ ನೀಡಿದವು. ಈ ಬಗೆಯ ಪರಸ್ಪರ ಸಹಕಾರ ಸ್ಫೂರ್ತಿಯಿಂದಾಗಿ ಅರ್ಥಿಕ ಹಿಂಜರಿತದ ನಂತರದ ವರ್ಷಗಳಲ್ಲಿ ಸದಸ್ಯರ ಸಹಾಯದಿಂದ ಜಿಲ್ಲಾ ಕೇಂದ್ರೀಯ ಸಹಕಾರ ಬ್ಯಾಂಕುಗಳು ಆರ್ಥಿಕ ಮುನ್ನಡೆ ಸಾಧಿಸಲು ಸಾಧ್ಯವಾಯಿತು. ಅನೇಕ ಬ್ಯಾಂಕುಗಳು ರೈತರ ಸಾಲ ಮರುಪಾವತಿ ಒಡಂಬಡಿಕೆ ಸಮಿತಿ(Debt Reconciliation Board)ಗಳನ್ನು ರಚಿಸುವ ಮೂಲಕ ಸಂಕಷ್ಟದಲ್ಲಿದ್ದ ರೈತರ ನೆರವಿಗೆ ಸಹಕಾರ ಹಸ್ತ ನೀಡಿದವು.

### ಸಹಕಾರಿ ವಲಯದ ಪ್ರಪ್ರಥಮ ಸಾಧನೆಗಳು

ಕರ್ನಾಟಕದಲ್ಲಿ ರಾಷ್ಟ್ರಮಟ್ಟದಲ್ಲಿಯೇ ಹಲವಾರು ಪ್ರಪ್ರಥಮ ಸಾಧನೆಗಳನ್ನು ಸಹಕಾರ ವಲಯದಲ್ಲಿ ಮಾಡಲಾಗಿದೆ. ಅವುಗಳೆಂದರೆ ಹುಬ್ಬಳ್ಳಿಯಲ್ಲಿ ೧೯೧೫ರಲ್ಲಿ ಆರಂಭಗೊಂಡ "ಕಾಟನ್ ಸೇಲ್ಸ್ ಸೊಸೈಟಿ" ದೇಶದ ಮೊದಲನೆಯ ಸಹಕಾರ ವಲಯದ ಹತ್ತಿ ಮಾರಾಟ ಸಹಕಾರ ಸಂಘವಾಗಿದ್ದು ಇಂದಿಗೂ ಕಾರ್ಯನಿರ್ವಹಿಸುತ್ತಿದೆ. ಅದರಂತೆ ಗದಗ್ ತಾಲೂಕಿನ ಹುಲಕೋಟಿಯಲ್ಲಿರುವ ಹಳೆಯ ಹುಲಕೋಟಿ ಸಹಕಾರಿ ಶಿಕ್ಷಣ ಸಂಘ (೧೯೨೧) (ಗದಗ ಜಿಲ್ಲೆ), ಜಗದ್ಗುರು ಗುರುಸಿದ್ದೇಶ್ವರ ಸಹಕಾರಿ ಆಸ್ಪತ್ರೆ ಘಟಪ್ರಭಾ (೧೯೫೧), ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ (೧೯೬೯) (ಬೆಳಗಾವಿ ಜಿಲ್ಲೆ) ಮುಂತಾದವು,

ರಾಜ್ಯದ ಸಹಕಾರಿ ವಲಯದ ವಿಶೇಷ ಬಗೆಯ ಸಂಘಗಳಾಗಿವೆ. ಸಂಕೇಶ್ವರದ ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆಯು(೧೯೫೬) ದೇಶದ ಸಹಕಾರಿ ವಲಯದ ಸಕ್ಕರೆ ಕಾರ್ಖಾನೆಗಳಲ್ಲಿ ಅತ್ಯುತ್ತಮವಾದುದೆಂದು ಪರಿಗಣಿಸಲಾಗಿದೆ. ಈ ಉಲ್ಲೇಖಗಳು ಕೇವಲ ಉದಾಹರಣೆಗಳು ಮಾತ್ರ. ಅದೇ ರೀತಿ ಬೆಂಗಳೂರಿನ ಬಿಡದಿ ಸಮೀಪವಿರುವ ೧೯೭೩ರಲ್ಲಿ ಕೆನರಾ ಬ್ಯಾಂಕ್‌ನಿಂದ ಪ್ರಾಯೋಜಿತಗೊಂಡ, ರೈತ ಸೇವಾ ಸಂಘವು ದೇಶದಲ್ಲಿಯೇ ಈ ಬಗೆಯ ಪ್ರಥಮ ಸಂಘವಾಗಿದೆ. ಅದರಂತೆ ರಾಮದುರ್ಗ (ಬೆಳಗಾವಿ ಜಿಲ್ಲೆ) ಬಳಿಯ ಚಂದರಗಿಯಲ್ಲಿ ೧೯೮೪ರಲ್ಲಿ ಆರಂಭಗೊಂಡ ಕ್ರೀಡಾ ಉತ್ತೇಜಕ (Sports Promotion and Development Society) ಮತ್ತು ಅಭಿವೃದ್ಧಿ ಸಂಘವು ದೇಶವ್ಯಾಪ್ತಿ ಮಾನ್ಯತೆ ಪಡೆದಿರುವ ಅಪೂರ್ವ ಸಂಸ್ಥೆಯಾಗಿದೆ. ಪಟ್ಟಣ(ಅರ್ಬನ್) ಸಹಕಾರ ಬ್ಯಾಂಕುಗಳ ವಲಯದಲ್ಲಿ ರಾಜ್ಯವು ದೇಶದಲ್ಲಿ ಮುಂದುವರೆದ ರಾಜ್ಯಗಳ ಪೈಕಿ ಒಂದಾಗಿದ್ದು ಗುಜರಾತ್ ಮತ್ತು ಮಹಾರಾಷ್ಟ್ರದ ನಂತರ ಮೂರನೆಯ ಸ್ಥಾನದಲ್ಲಿತ್ತು. ರಾಜ್ಯ ಪುನರ್ ರಚನೆಯ ನಂತರದ ವರ್ಷಗಳಲ್ಲಿ ಎಲ್ಲಾ ವಲಯಗಳಲ್ಲಿ ಸಹಕಾರ ಚಳವಳಿಯ ಪರಿಧಿಯು ವ್ಯಾಪಕವಾಗಿ ವಿಸ್ತಾರವಾಗಿರುವುದನ್ನು ಗಮನಿಸಬಹುದು. ರಾಜ್ಯ ಮತ್ತು ಜಿಲ್ಲಾಮಟ್ಟದಲ್ಲಿ ಅನೇಕ ಶೃಂಗ ಸಹಕಾರ ಸಂಸ್ಥೆಗಳು ದಾಖಲಾರ್ಹವಾದ ಅಭಿವೃದ್ಧಿಯ ಎತ್ತರವನ್ನು ಮತ್ತು ವಿಸ್ತಾರವನ್ನು ಸಾಧಿಸಿರುವುದು ಗಮನಾರ್ಹವಾಗಿದೆ. ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳವನ್ನು ರಚಿಸಿಕೊಂಡ ರಾಜ್ಯಗಳಲ್ಲಿ ಕರ್ನಾಟಕವು ದೇಶದಲ್ಲಿಯೇ ಮೊದಲನೆಯದಾಗಿದೆ (೧೯೬೫). ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಮತ್ತು ರಾಷ್ಟ್ರೀಯ ಸಹಕಾರ ಅಭಿವೃದ್ಧಿ ಮಂಡಲಿ (ಎನ್.ಸಿ.ಡಿ.ಸಿ.) ಸಂಸ್ಥೆಗಳಿಂದ ನೀಡಲಾಗುತ್ತಿರುವ ಷೇರು ಬಂಡವಾಳ, ಸಹಾಯಧನ, ಅನುದಾನ ಮುಂತಾದ ಹಣಕಾಸಿನ ನೆರವುಗಳು ಸಹಕಾರಿ ಸಂಘಗಳ ಸಂಖ್ಯೆಯನ್ನು ಹೆಚ್ಚಿಸುವಲ್ಲಿ ಸಹಾಯಕವಾಗಿವೆ. ರಾಜ್ಯದಲ್ಲಿ ಬೃಹತ್ ಕೈಗಾರಿಕೆಗಳಾದ ನೂಲಿನ ಗಿರಣಿ, ಹತ್ತಿಯ ಸಂಸ್ಕರಣೆ, ಬಟ್ಟೆ ತಯಾರಿಕೆ, ಸಕ್ಕರೆ ಉತ್ಪಾದನೆ, ಹೆಂಚು ತಯಾರಿಕೆ, ಆಹಾರ ಸಂಸ್ಕರಣೆ ಮುಂತಾದವುಗಳನ್ನು ಸಹಕಾರ ವಲಯದಲ್ಲಿ ಸ್ಥಾಪಿಸಲಾಗಿದೆ.

೧೯೭೬–೭೭ರಲ್ಲಿ ಆರ್ಥಿಕವಾಗಿ ಸಬಲವಲ್ಲದ ಬಹುಪಾಲು ಪ್ರಾಥಮಿಕ ಸಹಕಾರಿ ಸಂಘಗಳನ್ನು ದೊಡ್ಡ ಪ್ರಮಾಣದಲ್ಲಿ ವಿಲೀನಗೊಳಿಸಲಾಯಿತು ಇಲ್ಲವೇ ಸಬಲಗೊಳಿಸಲಾಯಿತು. ಇದರಿಂದಾಗಿ ಪ್ರಾಥಮಿಕ ಸಹಕಾರ ಸಂಸ್ಥೆಗಳ ಸಂಖ್ಯೆಯ ಪ್ರಮಾಣ ಗಣನೀಯವಾಗಿ ಕಡಿಮೆಯಾಯಿತು. ಆದರೆ ಪ್ರಾಥಮಿಕ ಸಹಕಾರಿ ಸಂಸ್ಥೆಗಳು ಆರ್ಥಿಕವಾಗಿ ಬೃಹತ್ ಬುನಾದಿಯ ಮೇಲೆ ನಿಲ್ಲಲು ಸಹಾಯಕವಾಯಿತು. ರಾಜ್ಯದ ಸಹಕಾರ ವಲಯದ ಪ್ರಾಮುಖ್ಯತೆಯನ್ನು ಗಮನಿಸಿ ೧೯೬೨ರಲ್ಲಿ ಸಹಕಾರ ನಿರ್ವಹಣಾ ಸಂಸ್ಥೆಯನ್ನು, (Institute of Co-operative Management) ಬೆಂಗಳೂರಿನಲ್ಲಿ ಆರಂಭಿಸಲಾಯಿತು. ಮುಂದೆ, ೧೯೯೦ರಲ್ಲಿ ಬ್ಯಾಂಕಿಂಗ್ ಮತ್ತು ಸಹಕಾರಿ ವಲಯದ ಸಿಬ್ಬಂದಿ ವರ್ಗಗಳ ತರಬೇತಿಗೆ ಅನುಕೂಲವಾಗುವಂತೆ ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ತರಬೇತಿ (National Agricultural and Rural Development Training Institute) ಸಂಸ್ಥೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಲಾಯಿತು.

ರಾಜ್ಯದಲ್ಲಿ ಮಾರ್ಚ್ ೨೦೧೦ ರಲ್ಲಿದ್ದಂತೆ ಒಟ್ಟು ಸಹಕಾರ ಸಂಸ್ಥೆಗಳ ಜಿಲ್ಲಾವಾರು ಸಂಖ್ಯೆ (ಸಮಾಪನಗೊಂಡ ಸಂಘಗಳೂ ಸೇರಿದಂತೆ) ಈ ಮುಂದಿನಂತಿತ್ತು. ಬೆಂಗಳೂರು (೧ನೇ ವೃತ್ತ) ೫೫೮ ಮತ್ತು (ವೃತ್ತ ೨) ೧,೪೫೮, ಬೆಂಗಳೂರು (ಗ್ರಾಮೀಣ) ೯೩೦ ಕೋಲಾರ ೧,೩೬೫, ತುಮಕೂರು ೧,೭೪೯, ಚಿತ್ರದುರ್ಗ ೭೫೦, ಶಿವಮೊಗ್ಗ ೯೫೨, ಬೆಳಗಾವಿ ೪,೨೬೭, ಧಾರವಾಡ ೮೨೦, ಬಿಜಾಪುರ ೧,೧೦೩, ಉತ್ತರ ಕನ್ನಡ ೭೯೫, ಮೈಸೂರು ೧,೮೪೭, ಮಂಡ್ಯ ೧,೭೪೯, ಹಾಸನ ೧,೬೦೭, ಚಿಕ್ಕಮಗಳೂರು ೫೨೮, ಕೊಡಗು ೩೩೪, ದಕ್ಷಿಣ ಕನ್ನಡ ೮೦೬, ಗುಲಬರ್ಗಾ ಹಾಗೂ ಯಾದಗಿರಿ ೧,೯೦೦, ರಾಯಚೂರು ೯೨೩, ಬಳ್ಳಾರಿ ೧,೧೩೮, ಬೀದರ್ ೯೧೫, ದಾವಣಗೆರೆ ೧,೩೩೦, ಬಾಗಲಕೋಟೆ ೧,೪೧೨, ಹಾವೇರಿ ೮೦೭, ಗದಗ ೭೫೦, ಚಾಮರಾಜನಗರ ೭೦೫, ಉಡುಪಿ ೪೯೨ ಮತ್ತು ಕೊಪ್ಪಳ ೫೬೭, ರಾಮನಗರ

೧,೦೪೦, ಚಿಕ್ಕಬಳ್ಳಾಪುರ ೧೨೪೦. ೨೦೧೧ ಮಾರ್ಚ್ ಅಂತ್ಯಕ್ಕೆ ರಾಜ್ಯದಲ್ಲಿ ಒಟ್ಟು ೪೮೪೮ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಸ್ಥೆಗಳಿದ್ದು ಅವುಗಳಲ್ಲಿ ೪೫೦೦ ಸಂಘಗಳು ಕಾರ್ಯನಿರತವಾಗಿದ್ದವು. ಇವಲ್ಲದೆ ೫೯೬ ಶಾಖೆಗಳುಳ್ಳ ೨೧ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಮತ್ತು ರಾಜ್ಯ ಮಟ್ಟದಲ್ಲಿ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಕಾರ್ಯನಿರ್ವಹಿಸುತ್ತಿದ್ದವು. ರಾಜ್ಯದ ರೈತರಿಗೆ ಕಿಸಾನ್ ಕ್ರೆಡಿಟ್ ಕಾರ್ಡುಗಳ ಮೂಲಕ ಕೃಷಿ ಸಾಲ ವಿತರಿಸುವ ಯೋಜನೆಯು ೧೯೯೭-೯೮ನೇ ಸಾಲಿನಿಂದ ಜಾರಿಗೆ ಬಂದಿದ್ದು, ಈ ಯೋಜನೆಯು ರೈತರ ಸಾಲದ ಅವಶ್ಯಕತೆಗಳಿಗನುಗುಣವಾಗಿ ಏಕಗಾವಕ್ಷಿಯ ಮುಖಾಂತರ ಅಲ್ಪಾವಧಿ, ಮಧ್ಯಮಾವಧಿ ಹಾಗೂ ಬಳಕೆಯ ಉದ್ದೇಶಗಳ ಸಾಲವನ್ನು ನೀಡುವ ಉದ್ದೇಶ ಹೊಂದಿದೆ. ಈ ಯೋಜನೆಯನ್ನು ವೈಯಕ್ತಿಕ ಅಪಘಾತ ವಿಮಾಯೋಜನೆ ಪಿಎಐಎಸ್ ನೊಂದಿಗೆ ಜೊತೆಗೂಡಿಸಲಾಗಿದ್ದು, ಇದರಿಂದಾಗಿ ಕಾರ್ಡುದಾರರು ₹ ೧೫ ರ ಪ್ರೀಮಿಯಮ್ ಅನ್ನು ಮೂರು ವರ್ಷಗಳು ಪಾವತಿಸಿ ₹ ೫೦,೦೦೦/- ವರೆಗಿನ ವಿಮಾ ಸೌಲಭ್ಯ ಹೊಂದಬಹುದಾಗಿದ್ದು, ೨೦೧೧ ಮಾರ್ಚ್ ಅಂತ್ಯದವರೆಗೆ ಒಟ್ಟು ೧೯,೭೭,೭೧೪ ಕಾರ್ಡುಗಳನ್ನು ವಿತರಿಸಲಾಗಿರುತ್ತದೆ. ರಾಜ್ಯ ರೈತರಿಗೆ ಶೇ.೩ರ ಬಡ್ಡಿದರದಲ್ಲಿ ಸಹಕಾರ ಸಂಸ್ಥೆಗಳ ಮೂಲಕ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಮತ್ತು ಕೃಷಿ ಸಂಬಂಧಿತ ಸಾಲಗಳನ್ನು ವಿತರಿಸುವ ಯೋಜನೆಯನ್ನು ಸರ್ಕಾರವು ಏಪ್ರಿಲ್ ೨೦೦೮ ರಿಂದ ಅನುಷ್ಠಾನಗೊಳಿಸಿದ್ದು, ಇದರ ಪ್ರಯೋಜನವನ್ನು ೨೦೧೦-೧೧ನೇ ಸಾಲಿನಲ್ಲಿ ೧೪,೭೬,೨೫೧ ರೈತ ಫಲಾನುಭವಿಗಳು ಪಡೆದಿದ್ದರು.

ರಾಜ್ಯದ ಪ್ರಾಥಮಿಕ ಸಹಕಾರಿ ಕೃಷಿ ಪತ್ತಿನ ಸಹಕಾರ ಸಂಘಗಳು ೧೯೯೫-೯೬ರಿಂದ ವ್ಯಾಪಾರ ಅಭಿವೃದ್ಧಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದ್ದು, ಈ ಯೋಜನೆಯಡಿಯಲ್ಲಿ ಮಾರ್ಚ್ ೨೦೧೧ರ ಅಂತ್ಯದವರೆಗೆ ೪,೫೦೦ ಸಹಕಾರ ಸಂಘಗಳನ್ನು ಒಳಪಡಿಸಲಾಗಿತ್ತು. ಈ ಯೋಜನೆಯಡಿಯಲ್ಲಿ ೨೦೦೮-೦೯, ೨೦೦೯-೧೦, ೨೦೧೦-೧೧ನೇ ಸಾಲಿನಲ್ಲಿಯ ಪ್ರಗತಿಯ ವಿವರ ಈ ರೀತಿ ಇರುತ್ತದೆ.

| ೨೦೦೮-೦೯ | | | ೨೦೦೯-೧೦ | | | ೨೦೧೦-೧೧ | | |
|---|---|---|---|---|---|---|---|---|
| ವಿವರ | ಗುರಿ | ಸಾಧನೆ | ಗುರಿ | ಸಾಧನೆ | ಶೇಕಡಾವಾರು ಸಾಧನೆ | ಗುರಿ | ಸಾಧನೆ | ಶೇಕಡಾವಾರು ಸಾಧನೆ |
| ಪತ್ತು | ೩೭೪೦.೫೭ | ೩೭೭೩.೯೯ | ೪೪೭೩.೧೯ | ೩೫೫೧.೯೮ | ೭೯.೪೦ | ೯೯೧೨.೪೨ | ೬೮೯೯.೬೧ | ೭೦.೫೧ |
| ಪತ್ತೇತರ | ೭೮೦.೯೭ | ೫೬೫.೭೫ | ೯೫೫.೫೪ | ೫೮೩.೩೬ | ೬೧.೦೫ | ೧೨೫೫.೨೦ | ೧೩೩೧.೪೩ | ೧೦೬.೦೭ |
| ಒಟ್ಟು | ೫೦೫೭.೬೮ | ೪೩೩೯.೭೩ | ೫೪೨೮.೭೮ | ೪೫೦೭.೫೨ | ೮೩.೦೩ | ೧೧೬೭.೬೨ | ೮೩೨೧.೦೪ | ೭೪.೫೧ |

ಸಮಗ್ರ ಸಹಕಾರ ಅಭಿವೃದ್ಧಿ ಯೋಜನೆಯನ್ವಯ ಸಹಕಾರ ಸಂಘಗಳಿಗೆ ಮೂಲ ಸೌಲಭ್ಯ ಕಲ್ಪಿಸಿಕೊಳ್ಳುವುದಕ್ಕಾಗಿ ಆರ್ಥಿಕ ಸಹಾಯ ನೀಡಲಾಗುತ್ತದೆ ಮತ್ತು ಈ ಯೋಜನೆಯನ್ನು ಆಯಾ ಜಿಲ್ಲೆಗಳ ಸರ್ವಾಂಗೀಣ ಅಭಿವೃದ್ಧಿಗಾಗಿ ವ್ಯವಸಾಯ ಹಾಗೂ ಇದಕ್ಕೆ ಸಂಬಂಧಪಟ್ಟ ಮೀನುಗಾರಿಕೆ, ಕೋಳಿ ಸಾಗಾಣಿಕೆ, ಹೈನುಗಾರಿಕೆ, ಕೈಮಗ್ಗ ಮುಂತಾದ ಉಪ ಉದ್ಯೋಗಗಳ ಅಭಿವೃದ್ಧಿಗಾಗಿ ಅನುಷ್ಠಾನಗೊಳಿಸಲಾಗುತ್ತದೆ. ಈ ಯೋಜನೆಯು ಬೆಂಗಳೂರು (ಗ್ರಾಮಾಂತರ), ಚಿಕ್ಕಮಗಳೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಅನುಷ್ಠಾನಗೊಂಡಿದ್ದು, ಗುಲಬರ್ಗಾ ಜಿಲ್ಲೆಯಲ್ಲಿ ಪ್ರಗತಿಯಲ್ಲಿದೆ. ಈ ಯೋಜನೆಯನ್ನು ಹಂತಹಂತವಾಗಿ ಇತರೆ ಜಿಲ್ಲೆಗಳಿಗೆ ವಿಸ್ತರಿಸುವ ಪ್ರಸ್ತಾವವಿರುತ್ತದೆ.

## ಯಶಸ್ವಿನಿ ಯೋಜನೆ

ಸಹಕಾರಿ ಸಂಘಗಳ ಸದಸ್ಯರು ಮತ್ತು ಅವರ ಕುಟುಂಬದ ಸದಸ್ಯರ ಆರೋಗ್ಯ ರಕ್ಷಣೆಗಾಗಿ ೨೦೦೩ ಜೂನ್ ಒಂದರಿಂದ "ಯಶಸ್ವಿನಿ" ಯೋಜನೆಯು ಆರಂಭವಾಗಿದ್ದು, ಈ ಯೋಜನೆಯ ಫಲಾನುಭವಿಗಳು ೧) ಉಚಿತ ಹೊರರೋಗಿ ಸಲಹೆ ೨) ರಿಯಾಯತಿ ದರದಲ್ಲಿ ರೋಗ ನಿರ್ಣಯ ಪರೀಕ್ಷೆಗಳು ೩) ಒಂದು ವರ್ಷದಲ್ಲಿ ಒಂದು ಶಸ್ತ್ರಚಿಕಿತ್ಸೆಯಾದಲ್ಲಿ ಒಂದು ಲಕ್ಷ ರೂಪಾಯಿವರೆಗೆ ಮತ್ತು ಒಂದಕ್ಕಿಂತ ಹೆಚ್ಚು ಶಸ್ತ್ರಚಿಕಿತ್ಸೆಯಾದರೆ ಎರಡು ಲಕ್ಷ ರೂಪಾಯಿಗಳವರೆಗೆ ಉಚಿತ ಶಸ್ತ್ರಚಿಕಿತ್ಸೆ ಸೌಲಭ್ಯಗಳನ್ನು ಪಡೆಯಬಹುದಾಗಿದೆ. ಇದಲ್ಲದೆ ನೀರಿನಲ್ಲಿ ಮುಳುಗುವಿಕೆ, ನಾಯಿಕಡಿತ, ಹಾವು ಕಡಿತ, ಹೋರಿಹಾಯ್ದು ಆದ ಗಾಯ, ಸುಟ್ಟಗಾಯ, ವಿದ್ಯುತ್ ಆಘಾತ, ಕೃಷಿ ಉಪಕರಣಗಳಿಂದಾದ ಆಘಾತ, ಸಾಮಾನ್ಯ ಹೆರಿಗೆ, ನವಜಾತ ಶಿಶುವಿನ ರಕ್ಷಣೆ ಸಂದರ್ಭಗಳಲ್ಲಿ ಈ ಯೋಜನೆಯಡಿ ನಿಗದಿತ ತುರ್ತು ಔಷದೋಪಚಾರ ಪಡೆಯಬಹುದಾಗಿದೆ. ಈ ಯೋಜನೆಯ ಪ್ರಯೋಜನ ಪಡೆಯಲು ಅತಿ ಗರಿಷ್ಟ ವಯಸ್ಸು ೭೫ ವರ್ಷಗಳು. ೨೦೧೧ ಮಾರ್ಚ್ ಅಂತ್ಯಕ್ಕೆ ೧,೯೮,೭೦೫ ಫಲಾನುಭವಿಗಳು. ಈ ಯೋಜನೆಯ ಸೌಲಭ್ಯವನ್ನು ಪಡೆದಿರುತ್ತಾರೆ.

ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ೧೯೧೫ ಸಾಲಿನಲ್ಲಿ ಸ್ಥಾಪನೆಗೊಂಡಿದ್ದು, ೨೦೧೧ ಮಾರ್ಚ್ ಅಂತ್ಯಕ್ಕೆ ₹ ೪೧೦.೪೦ ಕೋಟಿ ಸ್ವಂತ ಬಂಡವಾಳ. ₹ ೭೩೧೦.೪೬ ಕೋಟಿ ದುಡಿಯುವ ಬಂಡವಾಳ ಮತ್ತು ₹ ೪೬೪೬.೪೭ ಕೋಟಿ ಠೇವಣಿ ಹೊಂದಿತ್ತು. ೨೦೧೧ ಮಾರ್ಚ್ ಅಂತ್ಯಕ್ಕೆ ರಾಜ್ಯದಲ್ಲಿ ೩೧೯ ಪಟ್ಟಣ ಸಹಕಾರ ಬ್ಯಾಂಕುಗಳು (ಇವುಗಳಲ್ಲಿ ೨೮ ಮಹಿಳಾ ಪಟ್ಟಣ ಸಹಕಾರಿ ಬ್ಯಾಂಕುಗಳು) ಮತ್ತು ೩೧೭೫ ಕೃಷಿಯೇತರ ಸಹಕಾರಿ ಸಂಘಗಳಿದ್ದು, ೫೮,೬೨,೦೦೦ ಸದಸ್ಯರನ್ನು ಮತ್ತು ₹ ೨೫,೮೯೩.೫೬ ಕೋಟಿಗಳ ದುಡಿಯುವ ಬಂಡವಾಳವನ್ನು ಹೊಂದಿದ್ದವು. ರಾಜ್ಯದಲ್ಲಿ ೧೮೫ ತಾಲ್ಲೂಕು ಕೃಷಿ ಉತ್ಪನ್ನ ಮಾರಾಟ ಸಂಘಗಳಿದ್ದು, ಇವುಗಳ ಜೊತೆಗೆ ಅಡಿಕೆ ಮತ್ತಿತರ ವಾಣಿಜ್ಯ ಬೆಳೆಗಳ ಐದು ವಿಶೇಷ ಮಾರಾಟ ಸಹಕಾರ ಸಂಘಗಳು ಇರುತ್ತವೆ. ಬೆಂಗಳೂರಿನಲ್ಲಿ ಕರ್ನಾಟಕ ಸಹಕಾರಿ ಎಣ್ಣೆ ಬೀಜ ಬೆಳೆಗಾರರ ಮಹಾಮಂಡಳಿ, ಚಿತ್ರದುರ್ಗ, ಹುಬ್ಬಳ್ಳಿ, ರಾಯಚೂರುಗಳಲ್ಲಿ ಪ್ರಾಂತೀಯ ಎಣ್ಣೆ ಬೀಜ ಬೆಳೆಗಾರರ ಸಹಕಾರ ಒಕ್ಕೂಟಗಳು ಮತ್ತು ೩೫೨ ಪ್ರಾಥಮಿಕ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘಗಳು ಇದ್ದು ಅವು ೩೨೪೫ ಗ್ರಾಮಗಳ ವ್ಯಾಪ್ತಿಯಲ್ಲಿ ೧,೪೬,೪೮೩ ರೈತರನ್ನು ಒಳಗೊಂಡಿರುತ್ತವೆ. ತೋಟದ ಬೆಳೆಗಾರರ ಸಹಕಾರಿ ಮಾರಾಟ ಮತ್ತು ಸಂಸ್ಕರಣ ಸಂಘ ನಿಯಮಿತ. ಬೆಂಗಳೂರು (ಹಾಪ್ ಕಾಮ್ಸ್) ಇದು ೧೯೫೯ ರಲ್ಲಿ ನೋಂದಣಿಯಾಗಿದ್ದು ೨೮೩ ಮಾರಾಟ ಮಳಿಗೆಗಳನ್ನು ಹಾಗೂ ೦೭ ಸಂಗ್ರಹಣಾ ಕೇಂದ್ರಗಳನ್ನು ಹೊಂದಿದ್ದು, ಬೆಳೆಗಾರರಿಂದ ತೋಟಗಾರಿಕೆ ಉತ್ಪನ್ನಗಳನ್ನು ಯುಕ್ತ ದರದಲ್ಲಿ ಖರೀದಿಸಿ, ಗ್ರೇಡಿಂಗ್ ಮಾಡಿಸಿ ಗ್ರಾಹಕರಿಗೆ ಮಾರಾಟ ಮಾಡಲು ವ್ಯವಸ್ಥೆ ಮಾಡುತ್ತದೆ. ೨೦೧೧ ಮಾರ್ಚ್ ಅಂತ್ಯಕ್ಕೆ ಸಂಘವು ೪೧೪೯೭ ಸದಸ್ಯರನ್ನು ಹೊಂದಿದ್ದು ₹ ೩೦೧.೬೨ ಲಕ್ಷ ಷೇರು ಬಂಡವಾಳ, ಹಾಗೂ ₹ ೫೬೪೯.೫೨ ಲಕ್ಷಗಳ ದುಡಿಯುವ ಬಂಡವಾಳ ಹೊಂದಿತ್ತು.

## ಗ್ರಾಹಕ ಸಹಕಾರಿ ಸಂಘಗಳು

ರಾಜ್ಯದಲ್ಲಿ ಗ್ರಾಹಕ ಸಹಕಾರ ಸಂಘಗಳು ಮೂರು ಹಂತಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು. ರಾಜ್ಯ ಮಟ್ಟದಲ್ಲಿ ಬೆಂಗಳೂರಿನಲ್ಲಿರುವ ಕರ್ನಾಟಕ ರಾಜ್ಯ ಸಹಕಾರಿ ಗ್ರಾಹಕರ ಮಹಾಮಂಡಳಿ ೧೯೬೪ ರಲ್ಲಿ ನೊಂದಣಿಯಾಗಿದ್ದು ೨೫ ಸದಸ್ಯರನ್ನು ಹೊಂದಿದೆ. ಮತ್ತು ಬೆಂಗಳೂರಿನಲ್ಲಿ ಏಳು, ಹೊರಗಡೆ ಐದು ಜನತಾ ಬಜಾರ್‌ಗಳನ್ನು, ಇತರೆ ಜಿಲ್ಲೆಗಳಲ್ಲಿ ಏಳು ಶಾಖೆಗಳನ್ನು ನಡೆಸುತ್ತಿದೆ. ೨೦೧೧ ಮಾರ್ಚ್ ಅಂತ್ಯಕ್ಕೆ ₹ ೨೬೭.೨೦ ಲಕ್ಷ ಷೇರು ಬಂಡವಾಳ ಮತ್ತು ₹ ೬೬೬೦.೩೮ ಲಕ್ಷ ವ್ಯವಹಾರ ವಹಿವಾಟು ಇರುತ್ತದೆ. ರಾಜ್ಯದಲ್ಲಿ ೨೫ ಕಾರ್ಯನಿರತ ಜಿಲ್ಲಾ ಕೇಂದ್ರ ಸಹಕಾರಿ ಸಗಟು ಮಾರಾಟ ಸಂಘಗಳಿದ್ದು ಅವುಗಳ

ಷೇರು ಬಂಡವಾಳವು ₹ ೪೬೨.೮೯ ಲಕ್ಷ ಮತ್ತು ವ್ಯಾಪಾರ ವಹಿವಾಟು ₹ ೬,೩೦೦.೦೨ ಲಕ್ಷ ಇದ್ದಿತು. ರಾಜ್ಯದಲ್ಲಿ ೧೪೭೬ ಪ್ರಾಥಮಿಕ ಗ್ರಾಹಕರ ಸಹಕಾರ ಸಂಘಗಳಿದ್ದು ೨೦೧೧ ಮಾರ್ಚ್ ಅಂತ್ಯಕ್ಕೆ ಷೇರು ಬಂಡವಾಳ ₹ ೮೪೫.೫೫ ಲಕ್ಷ ಮತ್ತು ವ್ಯಾಪಾರ ವಹಿವಾಟು ₹ ೧೪,೨೨೨.೦೫ ಲಕ್ಷ ಇದ್ದಿತು.

## ಹಾಲು ಉತ್ಪಾದಕರ ಸಹಕಾರಿ ಸಂಘಗಳು

ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿಯು ೧೯೮೪ ರಲ್ಲಿ ಸ್ಥಾಪನೆಯಾಗಿದ್ದು ಹೈನು ಅಭಿವೃದ್ಧಿ ಯೋಜನೆಗಳನ್ನು ರಾಜ್ಯಾದ್ಯಂತ ವಿಸ್ತರಿಸಿ ಹೈನುಗಾರಿಕ ಅಭಿವೃದ್ಧಿಗಾಗಿ ದೂರಗಾಮಿ ಯೋಜನೆಗಳನ್ನು ಎನ್.ಡಿ.ಡಿ.ಬಿಯ ಸಹಯೋಗದೊಂದಿಗೆ ನಿರ್ವಹಿಸುತ್ತಿದೆ. ರಾಜ್ಯದಲ್ಲಿ ೧೭೦ ತಾಲ್ಲೂಕು ಹಾಗೂ ಸುಮಾರು ೧೯,೪೦೭ ಹಳ್ಳಿಗಳು ಒಳಗೊಂಡಂತೆ ೧೩ ಜಿಲ್ಲಾ ಸಹಕಾರಿ ಹಾಲು ಒಕ್ಕೂಟಗಳು, ೧೨,೩೭೨ ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘಗಳಿದ್ದು ೨೦೧೧ ಮಾರ್ಚ್ ಅಂತ್ಯಕ್ಕೆ ೧೦,೯೨೩ ಹಾಲು ಉತ್ಪಾದಕರ ಸಹಕಾರ ಸಂಘಗಳು ಕಾರ್ಯ ನಿರ್ವಹಿಸುತ್ತಿದ್ದವು. ಇವುಗಳಲ್ಲಿ ಶೇ.೯೬ರಷ್ಟು ಸಂಘಗಳು ಲಾಭದಲ್ಲಿದ್ದು, ಮಾರ್ಚ್ ೨೦೧೧ರ ಅಂತ್ಯಕ್ಕೆ ಸುಮಾರು ೨೦.೮೩ ಲಕ್ಷ ಗ್ರಾಮೀಣ ರೈತರು ಈ ಸಂಘಗಳಲ್ಲಿ ಸದಸ್ಯರಾಗಿದ್ದು. ಇದರಲ್ಲಿ ೬.೮೫ ಲಕ್ಷ ಮಹಿಳಾ ಸದಸ್ಯರಿದ್ದರು. ಮಹಾಮಂಡಲಿಯು ಹಾಲು ಹಾಗೂ ಹಾಲಿನ ಉತ್ಪನ್ನಗಳನ್ನು ನಂದಿನಿ ಬ್ರಾಂಡ್ ಹೆಸರಿನಲ್ಲಿ ಮಾರಾಟ ಮಾಡುತ್ತಿದ್ದು, ಸಹಕಾರಿ ಹೈನು ಉದ್ಯಮದಲ್ಲಿ ರಾಷ್ಟ್ರಮಟ್ಟದಲ್ಲಿ ಎರಡನೇ ಸ್ಥಾನ ಮತ್ತು ದಕ್ಷಿಣ ರಾಜ್ಯಗಳಲ್ಲಿ ಪ್ರಥಮ ಸ್ಥಾನದಲ್ಲಿದೆ. ೨೦೦೫-೦೬ ನೇ ಸಾಲಿನಲ್ಲಿ ಭಾರತ ಸರ್ಕಾರದ ಕೃಷಿ ಸಚಿವಾಲಯವು ನಂದಿನಿ ವೀರ್ಯಾಣು ಕೇಂದ್ರಕ್ಕೆ ಎರಡನೇ ಅತ್ಯುತ್ತಮ ಘನೀಕೃತ ವೀರ್ಯಾಣು ಕೇಂದ್ರವೆಂದು ಗುರುತಿಸಿ ಪ್ರಶಸ್ತಿ ನೀಡಿರುತ್ತದೆ.



ಕೆ.ಎಂ.ಎಫ್, ಚನ್ನರಾಯಪಟ್ಟಣ

**ಗೃಹ ನಿರ್ಮಾಣ ಸಹಕಾರ ಸಂಘ:** ಭಾರತೀಯ ಸ್ಟೇಟ್ ಬ್ಯಾಂಕ್ ರಾಜ್ಯದಲ್ಲಿ ಒಟ್ಟು ೧೪೯೩ ಗೃಹ ನಿರ್ಮಾಣ ಸಹಕಾರ ಸಂಘಗಳಿದ್ದು, ಇದರಲ್ಲಿ ೧೦೦೫ ಸಂಘಗಳು ಕಾರ್ಯನಿರತವಾಗಿದ್ದು ೫೩೦ ಸಂಘಗಳು ಸ್ಥಗಿತವಾಗಿದ್ದು ಮತ್ತು ೨೫೮ ಸಂಘಗಳು ಸಮಾಪನೆ ಗೊಂಡಿರುತ್ತವೆ. ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳಿ ದಿನಾಂಕ: ೧೫-೦೩-೧೯೫೫ರಂದು ಅಸ್ತಿತ್ವಕ್ಕೆ ಬಂದಿದ್ದು. ಇದರಲ್ಲಿ ಮಾರ್ಚ್ ೨೦೧೧ ಅಂತ್ಯಕ್ಕೆ ೮೩ ಪ್ರಾಥಮಿಕ ಕುಕ್ಕಟ ಸಹಕಾರ ಸಂಘಗಳು ಸದಸ್ಯತ್ವ ಪಡೆದಿದ್ದವು.

**ವಿದ್ಯುಚ್ಛಕ್ತಿ ಸಹಕಾರ ಸಂಘ:** ರಾಜ್ಯದಲ್ಲಿ ಐದು ಗ್ರಾಮೀಣ ವಿದ್ಯುಚ್ಛಕ್ತಿ ಸಹಕಾರ ಸಂಘಗಳು ನೋಂದಣಿಯಾಗಿದ್ದು ಇವುಗಳಲ್ಲಿ ಒಂದು ಗ್ರಾಮೀಣ ವಿದ್ಯುಚ್ಛಕ್ತಿ ಸಹಕಾರ ಸಂಘ ನಿ., ಹುಕ್ಕೇರಿ ಮಾತ್ರ ಕಾರ್ಯನಿರ್ವಹಿಸುತ್ತಿದೆ. ಇದು ೧೯೬೯ರಲ್ಲಿ ನೋಂದಣಿಗೊಂಡಿದ್ದು, ಪ್ರತಿಯೊಬ್ಬ ವಿದ್ಯುತ್ ಗ್ರಾಹಕನು ಸಂಘದ ಸದಸ್ಯನಾಗಿರುತ್ತಾನೆ. ೨೦೧೧ ಮಾರ್ಚ್ ಅಂತ್ಯಕ್ಕೆ ಷೇರು ಬಂಡವಾಳ ನಾಲ್ಕು ಕೋಟಿ ರೂಪಾಯಿಗಳಿದ್ದು ದುಡಿಯುವ ಬಂಡವಾಳ ₹ ೧೧೭.೪೧ ಕೋಟಿಗಳಾಗಿವೆ. ೨೦೧೧ ಮಾರ್ಚ್ ಅಂತ್ಯದಲ್ಲಿದ್ದಂತೆ ಇದರಿಂದ ೧೦೭ ಗ್ರಾಮಗಳು, ೧೫ ಹ್ಯಾಮ್ಲೆಟ್ಸ್ ಮತ್ತು ೧೪ ಪುನರ್ವಸತಿ ಕೇಂದ್ರಗಳಿಗೆ ವಿದ್ಯುತ್ಚ್ಛಕ್ತಿ ನೀಡಿದ್ದು, ಇದು ಕೆ.ಪಿ.ಸಿ.ಟಿ.ಎಲ್‌ಗೆ ಪರ್ಯಾಯವಾಗಿ ಕಾರ್ಯನಿರ್ವಹಿಸುತ್ತಿದ್ದವು.

**ಸಹಕಾರ ಸಾರಿಗೆ ಸಂಘ:** ರಾಜ್ಯದಲ್ಲಿ ೧೪ ಸಹಕಾರ ಸಾರಿಗೆ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು, ಇದರಲ್ಲಿ ಸಾರಿಗೆ ಸಹಕಾರ ಸಂಘ. ನಿ., ಕೊಪ್ಪ ೧೯೯೧ ರಲ್ಲಿ ನೋಂದಣಿಗೊಂಡಿದ್ದು, ೮೦ ಬಸ್ಸುಗಳನ್ನು ಹೊಂದಿದೆ ಮತ್ತು ೨೧೩ ವ್ಯಕ್ತಿಗಳು ಮತ್ತು ೭೩ ಪ್ರಾಥಮಿಕ ಸಂಘಗಳ ಸದಸ್ಯರನ್ನು ಹೊಂದಿದ್ದು, ಚಿಕ್ಕಮಗಳೂರು ಜಿಲ್ಲೆಯ ಗ್ರಾಮೀಣ ಪ್ರದೇಶದ ಮಾರ್ಗಗಳ ಶೇಕಡ ೬೫ರಷ್ಟನ್ನು ನಿರ್ವಹಿಸುತ್ತಿದೆ. ರಾಜ್ಯದಲ್ಲಿ ೧೪ ಸಹಕಾರಿ ಆಸ್ಪತ್ರೆಗಳು ನೋಂದಣಿಗೊಂಡಿದ್ದು, ಇವುಗಳಲ್ಲಿ ಒಂಬತ್ತು ಸಹಕಾರಿ ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿದ್ದವು.

**ಖಾಸಗಿ ಹಣಕಾಸು ವ್ಯವಹಾರ :** ೨೦೧೧ ಮಾರ್ಚ್ ಅಂತ್ಯಕ್ಕೆ ರಾಜ್ಯದಲ್ಲಿ ಒಟ್ಟು ೨೭೪೪ ಲೇವಾದೇವಿಗಾರರು, ೮೧೪೬ ಗಿರಿವಿದಾರರು ಹಾಗೂ ೭೭೨೭ ಹಣಕಾಸು ಸಂಸ್ಥೆಗಳು ಇರುತ್ತವೆ. ೨೦೦೮-೦೯ರಲ್ಲಿ ₹ ೪೧೬.೨೭ ಲಕ್ಷ, ೨೦೦೯-೧೦ರಲ್ಲಿ ₹ ೭೮೮.೧೬ ಲಕ್ಷ ಮತ್ತು ೨೦೧೦-೧೧ ರಲ್ಲಿ ₹ ೩೮೭.೬೭ ಲಕ್ಷ ಪರವಾನಗಿ ಶುಲ್ಕ ಹಾಗೂ ೨೦೧೦-೧೧ ರಲ್ಲಿ ₹ ೨೮೯.೧೪ ಲಕ್ಷ ಭದ್ರತಾ ಠೇವಣಿ (ಬಡ್ಡಿ ರಹಿತ) ಸರ್ಕಾರಕ್ಕೆ ಸಂದಾಯವಾಗಿರುತ್ತದೆ. ೨೦೧೧ ಮಾರ್ಚ್ ಅಂತ್ಯಕ್ಕೆ ರಾಜ್ಯದಲ್ಲಿ ಒಟ್ಟು ೫೩೩ ನೋಂದಾಯಿತ ಚೀಟಿ ಸಂಸ್ಥೆಗಳಿದ್ದು, ೨೦೦೮-೦೯ನೇ ಸಾಲಿನಲ್ಲಿ ₹ ೧೬.೯೫ ಲಕ್ಷ, ೨೦೦೯-೧೦ರಲ್ಲಿ ೨೯.೮೫ ಲಕ್ಷ ಮತ್ತು ೨೦೧೦-೧೧ ರಲ್ಲಿ ೬೪.೩೭ ಲಕ್ಷಗಳ ಶುಲ್ಕ ಆದಾಯ ರೂಪದಲ್ಲಿ ಸರ್ಕಾರಕ್ಕೆ ಬಂದಿರುತ್ತದೆ.

**ಕೋಷ್ಟಕ ೬.೨: ಕರ್ನಾಟಕದ ಸಹಕಾರಿ ವಲಯದ ದಶಕವಾರು ಪ್ರಗತಿಯ ನೋಟ ೧೯೬೧ ರಿಂದ ೨೦೧೦ರವರೆಗೆ.**

| ಕ್ರ. ಸಂ. | ವಿವರಣೆ | ೧೯೬೧ | ೧೯೭೧ | ೧೯೮೧ | ೧೯೯೧ | ೨೦೦೧ | ೨೦೦೭ | ೨೦೧೦ |
|---|---|---|---|---|---|---|---|---|
| ೧. | ಪ್ರಾಥಮಿಕ ವ್ಯವಸಾಯ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು | ೧೧೮ | ೧೭೦ | ೧೭೭ | ೧೭೭ | ೧೭೩ | ೧೭೭ | ೧೭೭ |
| ೨. | ಪ್ರಾಥಮಿಕ ವ್ಯವಸಾಯ ಪತ್ತಿನ ಸಹಕಾರಿ ಸಂಘಗಳು | ೯,೧೦೭ | ೮,೬೭೫ | ೪,೮೭೧ | ೪,೩೫೦ | ೪,೩೮೮ | ೪,೯೫೯ | ೪,೮೬೬ |
| ೩. | ದವಸದ ಬ್ಯಾಂಕುಗಳು(Grain Banks) | ೧,೦೨೭ | ೮೫೧ | ೮೪೪ | ೧೫೧ | ೧೨೩ | ಲಭ್ಯವಿಲ್ಲ | ೧೧೩ |
| ೪. | ಪಟ್ಟಣ ಸಹಕಾರಿ ಬ್ಯಾಂಕುಗಳು | ಲಭ್ಯವಿಲ್ಲ | ೨೧೦ | ೨೫೯ | ೨೨೩ | ೩೧೩ | ೨೯೬ | ೨೯೭ |
| ೫. | ನೌಕರರ ಮತ್ತು ಇತರೆಯವರ ಸಹಕಾರಿ ಕ್ರೆಡಿಟ್ ಸೊಸೈಟಿಗಳು | ಲಭ್ಯವಿಲ್ಲ | ೭೬೬ | ೧,೫೯೪ | ೧,೫೯೯ | ೨,೯೧೩ | ಲಭ್ಯವಿಲ್ಲ | ೩,೫೮೩ |
| ೬. | ಮಾರಾಟ ಸಹಕಾರಿ ಸಂಘಗಳು [ಜನರಲ್] | ೨೫೯ | ೨೦೭ | ೧೯೨ | ೧೮೯ | ೧೭೭ | ೩೨೯ | ೧೭೧ |
| ೭. | ವಿಶೇಷ ವಸ್ತು ಮಾರಾಟ ಸಹಕಾರಿ ಸಂಘಗಳು | ಲಭ್ಯವಿಲ್ಲ | ೬೨ | ೧೪೪ | ೩೪೦ | ೧೩೫ | ಲಭ್ಯವಿಲ್ಲ | ೮೯ |
| ೮. | ಸಂಸ್ಕರಣಾ ಸಹಕಾರಿ ಸಂಘಗಳು | ೨೯ | ೪೦ | ೬೯ | ೩೨ | ೧೦೧ | ಲಭ್ಯವಿಲ್ಲ | ೧೧೫ |
| ೯. | ಅರಣ್ಯ ಬೇಸಾಯ ಸಹಕಾರಿ ಸಂಘಗಳು (Forest Farming Societies) | ೧೪೪ | ೪೯೯ | ೫೯೫ | ೨೪೨ | ೧೦೮ | ಲಭ್ಯವಿಲ್ಲ | ೨೧೬ |
| ೧೦. | ಹಾಲು ಉತ್ಪಾದಕರ ಸಹಕಾರಿ ಸಂಘಗಳು | ೭೦ | ೬೧೭ | ೨,೫೭೭ | ೬,೨೯೧ | ೮,೨೫೩ | ೧೦,೬೬೭ | ೧೨,೦೫೦ |

| ಕ್ರ. ಸಂ. | ವಿವರಣೆ | ೧೯೬೧ | ೧೯೭೧ | ೧೯೮೧ | ೧೯೯೧ | ೨೦೦೧ | ೨೦೦೭ | ೨೦೧೦ |
|---|---|---|---|---|---|---|---|---|
| ೧೧. | ಜಾನುವಾರು ಸಹಕಾರಿ ಸಂಘಗಳು [ಪಶುಪಾಲನೆ] | ಇಲ್ಲ | ೬೩ | ೯೦ | ೭೩ | ೨೪೧ | ಲಭ್ಯವಿಲ್ಲ | ೩೬೪ |
| ೧೨. | ನೀರಾವರಿ ಸಹಕಾರಿ ಸಂಘಗಳು | ೩೫ | ೬೩ | ೨೭೫ | ೫೬೪ | ೧೮೫ | ಲಭ್ಯವಿಲ್ಲ | ೧೪೩ |
| ೧೩. | ಮೀನುಗಾರಿಕೆ ಸಹಕಾರಿ ಸಂಘಗಳು | ೭೦ | ೧೨೩ | ೧೯೩ | ೨೭೨ | ೩೭೫ | ಲಭ್ಯವಿಲ್ಲ | ೫೩೬ |
| ೧೪. | ಗ್ರಾಹಕರ ಸಹಕಾರಿ ಸಂಘಗಳು | ೩,೯೫೧ | ೧,೩೦೨ | ೧,೫೪೧ | ೧,೬೫೦ | ೧,೫೦೨ | ಲಭ್ಯವಿಲ್ಲ | ೧,೪೬೩ |
| ೧೫. | ಗೃಹನಿರ್ಮಾಣ ಸಹಕಾರಿ ಸಂಘಗಳು | ೩೫ | ೯೨೦ | ೧,೩೦೯ | ೧,೬೦೬ | ೧,೨೭೪ | ೧,೪೫೭ | ೧,೫೦೮ |
| ೧೬. | ನೇಕಾರರ ಸಹಕಾರಿ ಸಂಘಗಳು | ೬೨೧ | ೭೯೮ | ೮೩೧ | ೭೨೬ | ೪೧೦ | ಲಭ್ಯವಿಲ್ಲ | ೭೪೪ |
| ೧೭. | ಕೈಗಾರಿಕಾ ಸಹಕಾರಿ ಸಂಘಗಳು | ೧,೦೬೪ | ೧,೮೩೫ | ೧,೮೯೨ | ೧,೦೦೧ | ೮೯೧ | ಲಭ್ಯವಿಲ್ಲ | ೬೭೦ |
| ೧೮. | ಇತರೇ ಸಹಕಾರಿ ಸಂಘಗಳು(Other Co-operatives) | ೧,೩೮೮ | ೬೧ | ೧೨೯೮ | ೧,೪೩೯ | ೩,೩೦೯ | ೫೬೩ | ೧೭೬ |
| ೧೯. | ಸಮಾಪನೆಗೊಂಡ ಸಹಕಾರಿ ಸಂಘಗಳು | ೨೭೭ | ೨,೧೭೫ | ೪,೪೦೮ | ೪,೧೫೮ | ೩,೮೨೩ | ೨,೫೧೭ | ೨,೧೨೪ |
| ೨೦. | ನೀರು ಬಳಕೆದಾರರ ಸಹಕಾರಿ ಸಂಘಗಳು | ಲಭ್ಯವಿಲ್ಲ | ಲಭ್ಯವಿಲ್ಲ | ಲಭ್ಯವಿಲ್ಲ | ಲಭ್ಯವಿಲ್ಲ | ೧,೨೩೬ | ಲಭ್ಯವಿಲ್ಲ | ೨೮೧೮ |
| | ರಾಜ್ಯದ ಒಟ್ಟು ಸಹಕಾರಿ ಸಂಘಗಳು | ೧೮,೧೯೫ | ೧೯,೪೩೭ | ೨೩,೧೪೯ | ೨೫,೦೮೩ | ೨೯,೯೩೦ | ೨೫,೯೪೫ | ೩೫,೦೩೮ |

**ಕೋಷ್ಠಕ ೬.೩: ಕರ್ನಾಟಕದಲ್ಲಿ ಸಹಕಾರ ಚಳವಳಿಯ ಪ್ರಗತಿಯ ಆಯ್ದ ಕೆಲವು ವರ್ಷಗಳ ಪ್ರಗತಿಯ ಚಿತ್ರಣ**

(₹ ಲಕ್ಷಗಳಲ್ಲಿ)

| ವರ್ಷ | ಸಹಕಾರ ಸಂಘಗಳ ಸಂಖ್ಯೆ | ಸದಸ್ಯರ ಸಂಖ್ಯೆ | ಷೇರು ಬಂಡವಾಳ | ದುಡಿಯುವ ಬಂಡವಾಳ |
|---|---|---|---|---|
| ೧೯೯೦-೯೧ | ೨೫,೦೮೩ | ೧,೧೮,೦೦,೦೦೦ | ೪೩,೧೦೮.೦೦ | ೩,೧೫,೮೩೩.೦೦ |
| ೧೯೯೫-೯೬ | ೨೬,೪೧೧ | ೧,೩೫,೫೮,೪೮೦ | ೭೬,೫೬೫.೭೬ | ೧೦,೨೬,೫೫೦.೮೬ |
| ೨೦೦೦-೨೦೦೧ | ೨೯,೯೩೦ | ೧,೬೧,೬೭,೦೦೦ | ೧,೪೭,೩೧೬.೦೦ | ೨೧,೧೯,೮೬೭.೬೫ |
| ೨೦೦೬-೦೭ | ೩೨,೮೯೮ | ೨,೦೮,೦೦,೦೦೦ | ೧,೯೫,೩೦೦.೦೦ | ೨೬,೯೮,೦೦೦.೦೦ |
| ೨೦೦೯-೧೦ | ೩೪,೯೨೭ | ೧,೯೯,೦೪,೭೩೦ | ೩,೧೭,೧೦೦.೦೦ | ೩೮,೨೪,೯೦೦.೦೦ |

**ಮೂಲ:** ನಿಬಂಧಕರು, ಸಹಕಾರ ಸಂಘಗಳು, ಬೆಂಗಳೂರು

## ನಿಯಂತ್ರಿತ ಮಾರುಕಟ್ಟೆಗಳು (Regulated Markets)

ವಿಶೇಷವಾಗಿ ಕೃಷಿ ಉತ್ಪನ್ನಗಳ ಮಾರಾಟಕ್ಕೆ ನಿಯಂತ್ರಿತ ಮಾರುಕಟ್ಟೆ ಸೌಲಭ್ಯವನ್ನು ಒದಗಿಸುವ ಮೂಲಕ ರೈತರಿಗೆ ಯೋಗ್ಯವಾದ ಮತ್ತು ಸೂಕ್ತವಾದ ಬೆಲೆಗಳನ್ನು ದೊರಕಿಸಿಕೊಡುವುದರ ಅವಶ್ಯಕತೆಯನ್ನು ೧೯೨೮ರಲ್ಲಿ ರಚನೆಗೊಂಡ 'ರಾಯಲ್ ಕಮಿಷನ್ ಆನ್ ಅಗ್ರಿಕಲ್ಚರ್ ಸಮಿತಿ, ತನ್ನ ವರದಿಯಲ್ಲಿ



ಎ.ಪಿ.ಎಂ.ಸಿ. ಯಾರ್ಡ್ – ಹಾಸನ

ಪ್ರಥಮವಾಗಿ ಸೂಚಿಸಿತ್ತು. ಅದರನ್ವಯ ಏಕೀಕರಣ ಪೂರ್ವದಲ್ಲಿ ಕರ್ನಾಟಕದ ವಿವಿಧ ಭಾಗಗಳಲ್ಲಿ ಅವಶ್ಯಕತೆಗೆ ತಕ್ಕಂತೆ ಬೇರೆ ಬೇರೆ ಹಂತಗಳಲ್ಲಿ ನಿಯಂತ್ರಿತ ಮಾರುಕಟ್ಟೆಗಳನ್ನು ಆಯೋಜಿಸುವ ಪ್ರಯತ್ನಗಳು ನಡೆದವು. ಹಳೆಯ ಮುಂಬಯಿ ಕರ್ನಾಟಕ ಪ್ರದೇಶದಲ್ಲಿ ೧೯೨೭ರಲ್ಲಿಯೇ ಆ ಭಾಗದ ಪ್ರಮುಖ ವಾಣಿಜ್ಯ ಬೆಳೆಯಾದ ಹತ್ತಿಯ ಮಾರಾಟವನ್ನು ಬೊಂಬಾಯಿ ಕಾಟನ್ ಮಾರ್ಕೆಟ್ ಕಾಯಿದೆ ೧೯೨೭ರ ಅನ್ವಯ ನಿಯಂತ್ರಣಕ್ಕೆ ಒಳಪಡಿಸಲಾಯಿತು. ಅದರಂತೆ ಈ ಹಿಂದಿನ ಹೈದರಾಬಾದ್–ಕರ್ನಾಟಕ ಪ್ರದೇಶದಲ್ಲಿ ೧೯೩೦ರಲ್ಲಿ ನಿಯಂತ್ರಿತ ಮಾರುಕಟ್ಟೆ ವ್ಯವಸ್ಥೆಯನ್ನು ಜಾರಿಗೆ ತರಲಾಯಿತು. ಮದ್ರಾಸ್–ಕರ್ನಾಟಕ ಪ್ರದೇಶದಲ್ಲಿ ಮದ್ರಾಸ್ ವಾಣಿಜ್ಯ ಬೆಳೆಗಳ ಕಾನೂನು ೧೯೩೩ರನ್ವಯ ವಾಣಿಜ್ಯ ಬೆಳೆಗಳ ಮಾರಾಟವನ್ನು ನಿಯಂತ್ರಣಕ್ಕೆ ಒಳಪಡಿಸಲಾಯಿತು.

ಇನ್ನು ಚಿಕ್ಕ ರಾಜ್ಯ ಕೊಡಗಿನಲ್ಲೂ ಪ್ರಮುಖ ವಾಣಿಜ್ಯ ಬೆಳೆಯಾದ ಕಾಫಿ ಮಾರಾಟವನ್ನು ಕೇಂದ್ರ ಸರ್ಕಾರದ ಕಾಫಿ ಮಾರಾಟ ವಿಸ್ತರಣೆ ಕಾನೂನು ೧೯೪೨ (Coffee Marketing Expansion Act 1942) ಮತ್ತು ಕಾಫೀ ಕಾಯಿದೆ ೧೯೪೨ರ (Coffee Act 1942) ಅನ್ವಯ ನಿಯಂತ್ರಣಕ್ಕೆ ಒಳಪಡಿಲಾಯಿತು. ಹಳೆಯ ಮೈಸೂರು ಸಂಸ್ಥಾನದಲ್ಲಿ ಈ ಉದ್ದೇಶಕ್ಕಾಗಿ ಮೈಸೂರು ವ್ಯವಸಾಯ ಉತ್ಪನ್ನಗಳ ಅಧಿನಿಯಮ ೧೯೩೯ರಲ್ಲಿ ಜಾರಿಗೆ ತರಲಾಯಿತು. ಮೈಸೂರು ಸಂಸ್ಥಾನದಲ್ಲಿ ಪ್ರಥಮ ನಿಯಂತ್ರಿತ ಮಾರುಕಟ್ಟೆಯನ್ನು ತಿಪಟೂರಿನಲ್ಲಿ, ಕೊಬ್ಬರಿ ಮತ್ತು ತೆಂಗು ಮಾರಾಟವನ್ನು ನಿಯಂತ್ರಣಕ್ಕೆ ಒಳಪಡಿಸುವ ಮೂಲಕ ಆರಂಭಿಸಲಾಯಿತು.

ರಾಜ್ಯ ಪುನಾರಚನೆಯ ನಂತರ (೧೯೫೬) ರಾಜ್ಯದ ವಿವಿಧ ಭಾಗಗಳಲ್ಲಿ ಈ ಮೊದಲು ಬೇರೆ ಬೇರೆ ಕಾನೂನಿನನ್ವಯ ಕಾರ್ಯನಿರ್ವಹಿಸುತ್ತಿದ್ದ ೫೪ ಮಾರುಕಟ್ಟೆಗಳು, ಆ ಮಾರುಕಟ್ಟೆ ಸಮಿತಿಗಳ ಸಿಬ್ಬಂದಿ ವರ್ಗದವರು ಮತ್ತು ಅವುಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಮಾರುಕಟ್ಟೆಯ ಕಾರ್ಯಕರ್ತರುಗಳನ್ನು (Functionaries) ಹೊಸರಾಜ್ಯದ ನಿಯಂತ್ರಣಕ್ಕೆ ಒಳಪಡಿಸಲಾಯಿತು. ೧೯೬೬ರಲ್ಲಿ, ಇಡೀ ರಾಜ್ಯಕ್ಕೆ ಅನ್ವಯವಾಗುವ, ಹೆಚ್ಚು ವಿಸ್ತೃತವೂ, ಸಮಗ್ರವೂ ಆದ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ) ಅಧಿನಿಯಮವನ್ನು ರೂಪಿಸಿ, ೧೯೬೮ರ ಮೇ ತಿಂಗಳಿನಲ್ಲಿ ಜಾರಿಗೆ ತರಲಾಯಿತು.

ರಾಜ್ಯದಲ್ಲಿ ಮುಂಬೈ ಕೃಷಿ ಉತ್ಪನ್ನ ಮಾರುಕಟ್ಟೆ ಅಧಿನಿಯಮದ ಮೇರೆಗೆ ೧೯೩೬ರಲ್ಲಿ ಬೆಳಗಾವಿ ಜಿಲ್ಲೆಯ ಬೈಲಹೊಂಗಲದಲ್ಲಿ ಮಾರುಕಟ್ಟೆಯನ್ನು, ಮೈಸೂರು ಕೃಷಿ ಉತ್ಪನ್ನ ಮಾರುಕಟ್ಟೆ ಅಧಿನಿಯಮ ೧೯೩೯ರಡಿಯಲ್ಲಿ ತುಮಕೂರು ಜಿಲ್ಲೆಯ ತಿಪಟೂರಿನಲ್ಲಿ ೧೯೪೮ರಲ್ಲಿ ಮತ್ತೊಂದು ಮಾರುಕಟ್ಟೆಯನ್ನು ಸ್ಥಾಪಿಸಿದ್ದು, ಆನಂತರ ಎಲ್ಲಾ ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ಮಾರುಕಟ್ಟೆ ಸೇವೆಯು ವಿಸ್ತರಿಸಿದ್ದು, ೨೦೧೧ ಮಾರ್ಚ್ ಅಂತ್ಯದ ವೇಳೆಗೆ ರಾಜ್ಯದಲ್ಲಿ ೧೫೨ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಹಾಗೂ ೩೫೨ ಉಪ ಮಾರುಕಟ್ಟೆಗಳು ಕಾರ್ಯ ನಿರ್ವಹಿಸುತ್ತಿದ್ದವು. ಕೃಷಿ ಮಾರಾಟ ಇಲಾಖೆ ಮೂಲತಃ ಸಹಕಾರ ಇಲಾಖೆಯ ಭಾಗವಾಗಿದ್ದು, ೧೯೭೨ ರಿಂದ ಸ್ವತಂತ್ರ ಇಲಾಖೆಯಾಗಿರುತ್ತದೆ.

ಕರ್ನಾಟಕದ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ ಮತ್ತು ಅಭಿವೃದ್ಧಿ) ಶಾಸನ ೧೯೬೬ರ ಅನುಸಾರ ದಿನಾಂಕ ೧-೯-೧೯೭೨ರಂದು ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ ಸ್ಥಾಪನೆಗೊಂಡಿದ್ದು, ಇದು ರಾಜ್ಯದಲ್ಲಿ ಕೃಷಿ ಉತ್ಪನ್ನ ಮಾರಾಟಕ್ಕೆ ಸಂಬಂಧಿಸಿದ ಪ್ರೋತ್ಸಾಹಕ ಕ್ರಮಗಳನ್ನು ಕೈಗೊಳಲು ಸಲಹೆಯನ್ನು ರಾಜ್ಯ ಸರ್ಕಾರ, ಕೃಷಿ ಮಾರಾಟ ಇಲಾಖೆ, ಮತ್ತು ಕೃಷಿ ಮಾರುಕಟ್ಟೆ ಸಮಿತಿಗಳಿಗೆ ನೀಡುತ್ತದೆ. ಇದರ ಪದನಿಮಿತ್ತ ಅಧ್ಯಕ್ಷರು ರಾಜ್ಯ ಸರ್ಕಾರದ ಕೃಷಿ ಮಾರುಕಟ್ಟೆ ಸಚಿವರು ಇರುತ್ತಾರೆ. ರಾಜ್ಯದ ಮಾರುಕಟ್ಟೆ ಸಮಿತಿಗಳು ಪಡೆಯುವ ಮಾರುಕಟ್ಟೆ ಶುಲ್ಕ ಮತ್ತು ಲೈಸೆನ್ಸ್ ಶುಲ್ಕದ ಮೊತ್ತದಲ್ಲಿ ಒಟ್ಟು ಶೇ.೧೩ ರಷ್ಟು ಹಣವನ್ನು ವಂತಿಗೆ ರೂಪದಲ್ಲಿ ಪ್ರತಿ ತಿಂಗಳು ಮಂಡಳಿಗೆ ಸಂದಾಯವಾಗುತ್ತದೆ. ಇದರ ಜೊತೆಗೆ ರಾಜ್ಯ ಸರ್ಕಾರವು ಅನುಪಾತದಲ್ಲಿ ಶೇಕಡಾ ಒಂದರಷ್ಟು ಹಣವನ್ನು ಮಂಡಳಿಗೆ ನೀಡುತ್ತದೆ.

ವ್ಯವಸಾಯ ಉತ್ಪನ್ನಗಳ ಮಾರಾಟದಲ್ಲಿ ಮತ್ತು ಸಂಬಂಧಪಟ್ಟ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಅಧಿಕಾರಿ ವರ್ಗದವರು, ಮಾರುಕಟ್ಟೆಯ ಕಾರ್ಯಕರ್ತರಿಗೆ ಸೂಕ್ತ ತರಬೇತಿಯನ್ನು ನೀಡಲು ಸಹಾಯಕವಾಗುವಂತೆ ಹುಬ್ಬಳ್ಳಿ (೧೯೬೪), ಮತ್ತು ಮೈಸೂರುಗಳಲ್ಲಿ ತರಬೇತಿ ಕಾಲೇಜುಗಳನ್ನು ಆರಂಭಿಸಲಾಗಿದ್ದು ಈ ದಿಶೆಯಲ್ಲಿ ಕರ್ನಾಟಕವು ದೇಶದಲ್ಲಿಯೇ ಮೊದಲನೆಯದು ಎಂಬುದು ಗಮನಾರ್ಹ. ಅದರಂತೆ ಈ ಮಾರುಕಟ್ಟೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಾರುಕಟ್ಟೆ ಕಾರ್ಯಕರ್ತರಾದ ಹಮಾಲರು; ತೂಕಮಾಡುವವರು, ಮತ್ತು ಗಾಡಿ ಹೊಡೆಯುವವರಿಗೆ ಸಾಮಾಜಿಕ ಗುಂಪು ವಿಮೆಯ ಸೌಲಭ್ಯವನ್ನು ಒದಗಿಸಿರುವ ರಾಜ್ಯಗಳಲ್ಲಿ ಕರ್ನಾಟಕವು ರಾಷ್ಟ್ರದಲ್ಲಿಯೇ ಪ್ರಥಮವಾಗಿದೆ. ಅದೂ ಅಲ್ಲದೆ ನಿಯಂತ್ರಿತ ಮಾರುಕಟ್ಟೆ ಸಮಿತಿಗಳು ರೈತರ ಉತ್ಪನ್ನಗಳ ಅಡಮಾನದ ಆಧಾರದಲ್ಲಿ ಅಲ್ಪಾವಧಿಗೆ ₹ ೫೦,೦೦೦ದವರೆಗೆ ಸಾಲ ಮುಂಗಡ ನೀಡುವ ವ್ಯವಸ್ಥೆಯನ್ನು ಜಾರಿಯಲ್ಲಿ ತರಲಾಗಿದೆ.

### ಬೆಂಬಲ ಬೆಲೆ ಯೋಜನೆ

ಮಾರುಕಟ್ಟೆಗಳಲ್ಲಿ ಕೃಷಿ ಉತ್ಪನ್ನಗಳ ಬೆಲೆಗಳು ಕುಸಿದಾಗ ರೈತರು ನಷ್ಟ ಅನುಭಿಸುವುದನ್ನು ತಪ್ಪಿಸುವುದಕ್ಕಾಗಿ ಬೆಂಬಲ ಬೆಲೆ ಯೋಜನೆ ಜಾರಿಗೊಂಡಿದ್ದು, ಕೇಂದ್ರ ಸರಕಾರದ ಪರವಾಗಿ ರಾಜ್ಯ ಸರ್ಕಾರವು ವಿವಿಧ ಸಂಸ್ಥೆಗಳ ಮೂಲಕ ರೈತರಿಂದ ಬೆಂಬಲ ಬೆಲೆಯಲ್ಲಿ ಕೃಷಿ ಉತ್ಪನ್ನಗಳನ್ನು ಖರೀದಿ ಮಾಡುತ್ತದೆ. ಶೀಘ್ರವಾಗಿ ಹಾಳಾಗುವ ಟೊಟೋಟೋ ಈರುಳ್ಳಿ, ಆಲೂಗಡ್ಡೆ, ಹಸಿಮೆಣಸಿನಕಾಯಿ ಮೊದಲಾದ ಉತ್ಪನ್ನಗಳಿಗೆ ಕೇಂದ್ರ ಸರ್ಕಾರ ಬೆಂಬಲ ಬೆಲೆ ಘೋಷಿಸುವುದಿಲ್ಲವಾದ್ದರಿಂದ ಇಂತಹ ಉತ್ಪನ್ನಗಳ ಬೆಲೆ ಕುಸಿದಾಗ ರಾಜ್ಯ ಸರ್ಕಾರವು ಫ್ಲೋರ್ ಪ್ರೈಸ್ ಯೋಜನೆಯಡಿ ಬೆಂಬಲ ಬೆಲೆ ಘೋಷಿಸಿ ರೈತರಿಂದ ಉತ್ಪನ್ನಗಳನ್ನು ಖರೀದಿಸುತ್ತದೆ. ಕೆಲವು ಸಂದರ್ಭಗಳಲ್ಲಿ "ಮಾರುಕಟ್ಟೆ ಮಧ್ಯಪ್ರವೇಶ ಯೋಜನೆ"ಯಡಿ (Marketing Intervention Scheme) ರಾಜ್ಯ ಸರ್ಕಾರ ಬೆಂಬಲ ಬೆಲೆ ಘೋಷಿಸಿ ರೈತರಿಂದ ಕೃಷಿ ಉತ್ಪನ್ನಗಳನ್ನು ಖರೀದಿಸುತ್ತದೆ. ಈ ಯೋಜನೆಗಳನ್ನು ಅನುಷ್ಠಾನಗೊಳಿಸಲು ರಾಜ್ಯದಲ್ಲಿ ಆವರ್ತ ನಿಧಿ ಸ್ಥಾಪಿಸಿದ್ದು, ೨೦೧೦-೧೧ನೇ ಸಾಲಿನಲ್ಲಿ ೧೫೦.೫ ಕೋಟಿ ಹಣವನ್ನು ಈ ನಿಧಿಯಿಂದ ಬಿಡುಗಡೆ ಮಾಡಿದ್ದು, ೬.೩೯ ಲಕ್ಷ ಕ್ವಿಂಟಾಲ್‌ನಷ್ಟು ವಿವಿಧ ಉತ್ಪನ್ನಗಳನ್ನು ೯೬೮೩ ಫಲಾನುಭವಿ ರೈತರಿಂದ ಖರೀದಿಸಲಾಗಿತ್ತು.

### ರೈತ ಸಂಜೀವಿನಿ ಯೋಜನೆ

ರೈತರು ಅಥವಾ ರೈತ ಕುಟುಂಬದವರು ಕೃಷಿ ಕಾರ್ಯದಲ್ಲಿ ಅಥವಾ ಮಾರಾಟ ಚಟುವಟಿಕೆಗಳಲ್ಲಿ ತೊಡಗಿದ್ದಾಗ ಸಾವು ಅಥವಾ ಶಾಶ್ವತ ಅಂಗವಿಕಲತೆ ಸಂಭವಿಸಿದಲ್ಲಿ ಅವರಿಗೆ ಈ ಯೋಜನೆಯಡಿ ಪರಿಹಾರ ನೀಡಲಾಗುವುದು. ಸಾವು ಸಂಭವಿಸಿದಲ್ಲಿ ₹ ೫೦,೦೦೦/- ಮತ್ತು ಶಾಶ್ವತ ಅಂಗವಿಕಲತೆಯಾದರೆ, ಅಂಗವಿಕಲತೆ ಪ್ರಮಾಣಕ್ಕನುಗುಣವಾಗಿ ₹ ೧,೫೦೦/- ದಿಂದ ೧೫,೦೦೦/-ವರೆಗೆ ಪರಿಹಾರ

ನೀಡಲಾಗುತ್ತದೆ. ಇದಕ್ಕಾಗಿ ರೈತರು ಯಾವುದೇ ಪ್ರೀಮಿಯಂ ಹಣವನ್ನು ನೀಡಬೇಕಾಗಿರುವುದಿಲ್ಲ. ಈ ಯೋಜನೆಯಡಿ ೨೦೦೯-೧೦ ರಲ್ಲಿ ₹ ೪.೬೬ ಕೋಟಿಯನ್ನು ೧೦೨೩ ರೈತರಿಗೆ ಹಾಗು ೨೦೧೦-೧೧ರಲ್ಲಿ ₹ ೩.೮೩ ಕೋಟಿಯನ್ನು ೮೮೫ ರೈತರಿಗೆ ನೀಡಲಾಗಿರುತ್ತದೆ.

### ಜನಶ್ರೀ ವಿಮಾ ಯೋಜನೆ

ಮಾರುಕಟ್ಟೆ ಸಮಿತಿಗಳಲ್ಲಿ ಲೈಸನ್ಸ್ ಪಡೆದು ಕಾರ್ಯ ನಿರ್ವಹಿಸುತ್ತಿರುವ ಹಮಾಲರು, ತೂಕದವರು, ಮತ್ತು ಚಕ್ಕಡಿಯವರಿಗಾಗಿ ಈ ಯೋಜನೆಯನ್ನು ಜಾರಿಗೆ ತಂದಿದ್ದು, ಭಾರತೀಯ ಜೀವ ವಿಮಾ ನಿಗಮದ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯ ಪ್ರಯೋಜನೆ ಪಡೆಯುವ ಫಲಾನುಭವಿಗಳು ಪ್ರತೀ ವರ್ಷ ₹ ೧೦೦/- ಪ್ರೀಮಿಯಂ ಹಣವನ್ನು ನೀಡಬೇಕಾಗಿದ್ದು, ಇನ್ನುಳಿದ ₹ ೧೦೦/-ನ್ನು ಭಾರತ ಸರ್ಕಾರವು ಭರಿಸುತ್ತದೆ. ಈ ಯೋಜನೆಯ ಅನುಸಾರ ಹೆಸರು ನೊಂದಾಯಿಸಿದ ವ್ಯಕ್ತಿ ಅಪಘಾತದಿಂದ ಮೃತನಾದರೆ ಅಥವಾ ಶಾಶ್ವತ ಅಂಗವಿಕಲತೆಗೊಳಗಾದರೆ ₹ ೭೫,೦೦೦/- ಗಳನ್ನೂ ಸ್ವಾಭಾವಿಕ ಮರಣ ಹೊಂದಿದರೆ. ₹ ೩೦,೦೦೦/-ಗಳನ್ನು ವಾರಸುದಾರರಿಗೆ ನೀಡಲಾಗುತ್ತದೆ. ೨೦೦೯-೧೦ನೇ ಸಾಲಿನಲ್ಲಿ ೧೧೧ ಜನರಿಗೆ ₹ ೩೪.೨೮ ಲಕ್ಷ ಹಾಗೂ ೨೦೧೦-೧೧ ರಲ್ಲಿ ೯೯ ಫಲಾನುಭವಿಗಳಿಗೆ ₹ ೩೦.೫೯ ಲಕ್ಷ ಪರಿಹಾರ ನೀಡಲಾಗಿರುತ್ತದೆ.

ನಿಯಂತ್ರಿತ ಮಾರುಕಟ್ಟೆ ಕಾಯ್ದೆ ೧೯೬೮ ಜಾರಿಗೆ ಬಂದ ನಂತರ ರಾಜ್ಯದ ಹೆಚ್ಚು ಹೆಚ್ಚು ಪ್ರದೇಶಗಳನ್ನು ಮತ್ತು ಹೆಚ್ಚು ಹೆಚ್ಚು ವ್ಯವಸಾಯ ಉತ್ಪನ್ನಗಳನ್ನು ಮಾರಾಟ ನಿಯಂತ್ರಣಕ್ಕೆ ಒಳಪಡಿಸುವ ಪ್ರಯತ್ನಗಳು ಮುಂದುವರಿದಿವೆ. ೧೯೭೮-೭೯ರ ವೇಳೆಗೆ ರಾಜ್ಯದಲ್ಲಿದ್ದ ನಿಯಂತ್ರಣ ಮಾರುಕಟ್ಟೆ ಸಂಖ್ಯೆ ೧೧೫ಕ್ಕೆ ಹೆಚ್ಚಳಗೊಂಡಿದ್ದು, ಉಪಮಾರುಕಟ್ಟೆಗಳು ಸಂಖ್ಯೆ ೨೧೦ಕ್ಕೆ ಹೆಚ್ಚಳಗೊಂಡಿತ್ತು. ಈ ನಿಟ್ಟಿನಲ್ಲಿ ಕರ್ನಾಟಕದ ಸ್ಥಾನ ರಾಷ್ಟ್ರದಲ್ಲಿ ಆರನೆಯದಾಗಿತ್ತು. ಅದೇ ೧೯೯೧-೯೨ನೇ ಸಾಲಿನಲ್ಲಿ ರಾಜ್ಯದಲ್ಲಿ ಒಟ್ಟು ೧೧೬ ಮುಖ್ಯ ಮಾರುಕಟ್ಟೆಗಳು ಮತ್ತು ೩೦೩ ಉಪಮಾರುಕಟ್ಟೆಗಳು ಕಾರ್ಯನಿರ್ವಹಿಸುತ್ತಿದ್ದವು. ಆ ಪ್ರಕಾರ ರಾಜ್ಯದಲ್ಲಿ ಕಂದಾಯ ವಲಯವಾರು, ಮಾರುಕಟ್ಟೆ ಮತ್ತು ಉಪಮಾರುಕಟ್ಟೆಗಳ ಸಂಖ್ಯೆ ಈ ಮುಂದಿನಂತೆ ಇರುವದು. ಆವರಣದಲ್ಲಿರುವ ಸಂಖ್ಯೆಯು ಉಪಮಾರುಕಟ್ಟೆಯನ್ನು ಸೂಚಿಸುತ್ತದೆ. ಬೆಳಗಾವಿ-೩೯ (೧೧೮), ಬೆಂಗಳೂರು-೩೩ (೭೨), ಗುಲಬರ್ಗಾ-೨೬ (೬೩), ಹಾಗೂ ಮೈಸೂರು-೧೮ (೫೦). ಅದೇ ೨೦೦೨-೦೩ ವೇಳೆಗೆ ರಾಜ್ಯದಲ್ಲಿ ೧೪೪ ಮುಖ್ಯ ಮಾರುಕಟ್ಟೆಗಳು ಮತ್ತು ೩೪೩ ಉಪಮಾರುಕಟ್ಟೆಗಳು ಕಾರ್ಯನಿರ್ವಹಿಸುತ್ತಿದ್ದವು. ಕಂದಾಯ ವಿಭಾಗವಾರು ಅವುಗಳ ಹಂಚಿಕೆ ಈ ರೀತಿ ಇತ್ತು. ಬೆಳಗಾವಿ-೪೩ (೧೨೯), ಬೆಂಗಳೂರು-೩೬ (೮೯), ಗುಲಬರ್ಗಾ-೨೬ (೬೯) ಮತ್ತು ಮೈಸೂರು-೩೭ (೫೬). ಆವರಣದಲ್ಲಿರುವ ಸಂಖ್ಯೆಗಳು ಉಪಮಾರುಕಟ್ಟೆಯನ್ನು ಸೂಚಿಸುತ್ತವೆ. ಅದೇ ೨೦೦೬-೦೭ರ ವೇಳೆಗೆ ರಾಜ್ಯಾದ್ಯಂತ ಇದ್ದ ನಿಯಂತ್ರಣ ಮಾರುಕಟ್ಟೆಗಳ ಸಂಖ್ಯೆ ೧೪೫ ಮತ್ತು ಉಪಮಾರುಕಟ್ಟೆಗಳ ಸಂಖ್ಯೆ ೩೫೦ ಈ ಪೈಕಿ ಅತ್ಯಂತ ಹೆಚ್ಚಿನ ಸಂಖ್ಯೆಯ ಮಾರುಕಟ್ಟೆಗಳು ಬೆಳಗಾವಿ ಜಿಲ್ಲೆಯಲ್ಲಿ (೧೦) ಮತ್ತು ಉಪಮಾರುಕಟ್ಟೆಯಲ್ಲಿಯೂ ಅದೇ ಜಿಲ್ಲೆ ಅತ್ಯಂತ ಹೆಚ್ಚಿನ ಸಂಖ್ಯೆಯನ್ನು ಹೊಂದಿತ್ತು (೩೬); ಅದರ ನಂತರದ ಸ್ಥಾನದಲ್ಲಿ ತುಮಕೂರು ಜಿಲ್ಲೆ ೨೫ ಮಾರುಕಟ್ಟೆಗಳನ್ನು ಹೊಂದಿತ್ತು.

ರಾಜ್ಯದಲ್ಲಿ ಹಳೆಯ ಮುಂಬಯಿ ಕರ್ನಾಟಕ ಪ್ರದೇಶಗಳಲ್ಲಿ ನಿಯಂತ್ರಿತ ಮಾರುಕಟ್ಟೆ ಕಾನೂನನ್ನು ಬಹಳ ಹಿಂದೆಯೇ ಜಾರಿಯಲ್ಲಿ ತಂದಿದ್ದರಿಂದ ಮಾರುಕಟ್ಟೆಗಳ ಸಂಖ್ಯೆ ಮತ್ತು ಕಾರ್ಯ ವ್ಯಾಪ್ತಿಯ ಕ್ಷೇತ್ರ ಆ ಭಾಗದಲ್ಲಿ ಹೆಚ್ಚಾಗಿರುವುದನ್ನು ಕಾಣಬಹುದು. ೨೦೦೯-೧೦ರಲ್ಲಿ ಇದ್ದಂತೆ ಜಿಲ್ಲಾವಾರು ನಿಯಂತ್ರಿತ ಮಾರುಕಟ್ಟೆಗಳು ಮತ್ತು ಅವುಗಳನ್ನು ನಿರ್ವಹಿಸಿದ ಒಟ್ಟು ವ್ಯವಹಾರ ಈ ಮುಂದಿನ ಕೋಷ್ಟಕದಲ್ಲಿ ನೀಡಿದೆ.

## ಕೋಷ್ಟಕ ೬.೪: ಜಿಲ್ಲಾವಾರು ನಿಯಂತ್ರಿತ ಮಾರುಕಟ್ಟೆಗಳ ವಹಿವಾಟು ವಿವರ

| ಕ್ರ. ಸಂ | ಜಿಲ್ಲೆಗಳು | ಮುಖ್ಯ ಮಾರುಕಟ್ಟೆಗಳು | ಉಪ ಮಾರುಕಟ್ಟೆಗಳು | ಒಟ್ಟು ಮಾರುಕಟ್ಟೆಗಳು | ವ್ಯವಹಾರ ಮೌಲ್ಯ (ಲಕ್ಷ ₹ ಗಳಲ್ಲಿ) |
|---|---|---|---|---|---|
| ೧ | ಬೆಂಗಳೂರು | ೨ | ೭ | ೯ | ೩,೨೨,೨೮೩.೩೯ |
| ೨ | ಬೆಂಗಳೂರು (ಗ್ರಾ) | ೧ | ೫ | ೬ | ೧೯,೭೫೬.೦೨ |
| ೩ | ರಾಮನಗರ | ೩ | ೫ | ೮ | ೪,೩೪೯.೩೧ |
| ೪ | ಚಿತ್ರದುರ್ಗ | ೪ | ೧೦ | ೧೪ | ೫೭,೨೫೩.೬೭ |
| ೫ | ದಾವಣಗೆರೆ | ೬ | ೮ | ೧೪ | ೯೪,೪೯೧.೨೦ |
| ೬ | ಕೋಲಾರ | ೫ | ೭ | ೧೨ | ೩೪,೩೩೩.೯೨ |
| ೭ | ಚಿಕ್ಕಬಳ್ಳಾಪುರ | ೪ | ೮ | ೧೨ | ೧೧,೨೮೭.೧೮ |
| ೮ | ಶಿವಮೊಗ್ಗ | ೪ | ೧೮ | ೨೨ | ೧,೧೫,೧೧೫.೩೩ |
| ೯ | ತುಮಕೂರು | ೯ | ೨೫ | ೩೪ | ೬೮,೮೬೭.೧೧ |
| ೧೦ | ಚಿಕ್ಕಮಗಳೂರು | ೬ | ೯ | ೧೫ | ೨೩,೫೩೯.೮೨ |
| ೧೧ | ದಕ್ಷಿಣ ಕನ್ನಡ | ೫ | ೯ | ೧೪ | ೫೬,೩೬೩.೭೭ |
| ೧೨ | ಉಡುಪಿ | ೩ | ೩ | ೬ | ೧೧,೩೬೩.೫೪ |
| ೧೩ | ಹಾಸನ | ೬ | ೧೭ | ೨೩ | ೪೧,೫೫೧.೪೮ |
| ೧೪ | ಕೊಡಗು | ೩ | ೪ | ೭ | ೧೫,೫೪೭.೬೭ |
| ೧೫ | ಮಂಡ್ಯ | ೬ | ೧೦ | ೧೬ | ೫೧,೦೪೨.೦೯ |
| ೧೬ | ಮೈಸೂರು | ೭ | ೮ | ೧೫ | ೭೫,೨೬೦.೪೨ |
| ೧೭ | ಚಾಮರಾಜನಗರ | ೩ | ೪ | ೭ | ೧೦,೪೮೨.೭೫ |
| ೧೮ | ಬೆಳಗಾವಿ | ೧೦ | ೩೭ | ೪೭ | ೬೬,೫೩೩.೯೦ |
| ೧೯ | ಬಿಜಾಪುರ | ೩ | ೧೪ | ೧೭ | ೨೫,೨೧೯.೦೪ |
| ೨೦ | ಬಾಗಲಕೋಟೆ | ೫ | ೧೫ | ೨೦ | ೧೩,೭೫೮.೬೭ |
| ೨೧ | ಧಾರವಾಡ | ೫ | ೧೨ | ೧೭ | ೫೩,೪೦೭.೨೪ |
| ೨೨ | ಗದಗ | ೫ | ೧೭ | ೨೨ | ೪೨,೪೮೬.೬೨ |
| ೨೩ | ಹಾವೇರಿ | ೭ | ೧೨ | ೧೯ | ೧,೦೬,೧೭೦.೧೮ |
| ೨೪ | ಉತ್ತರಕನ್ನಡ | ೮ | ೨೦ | ೨೮ | ೩೮,೧೫೫.೪೯ |
| ೨೫ | ಬಳ್ಳಾರಿ | ೬ | ೧೫ | ೨೧ | ೯೧,೪೯೧.೪೪ |
| ೨೬ | ಬೀದರ್ | ೫ | ೯ | ೧೪ | ೧೯,೯೯೬.೪೪ |
| ೨೭ | ಗುಲಬರ್ಗಾ | ೭ | ೨೨ | ೨೯ | ೧,೩೪,೫೬೮.೫೨ |
| ೨೮ | ಯಾದಗಿರಿ | ೨೦೦೯ ಡಿಸೆಂಬರ್‌ನಲ್ಲಿ ಈ ಜಿಲ್ಲೆ ನೂತನವಾಗಿ ರಚಿಸಲ್ಪಟ್ಟಿದೆ | | | |
| ೨೯ | ರಾಯಚೂರು | ೪ | ೧೨ | ೧೬ | ೧,೩೦,೦೩೫.೨೨ |
| ೩೦ | ಕೊಪ್ಪಳ | ೪ | ೧೩ | ೧೭ | ೪೪,೯೨೯.೮೧ |
| | ಒಟ್ಟು | ೧೪೬ | ೩೫೫ | ೫೦೧ | ೧೭,೭೯,೬೪೧.೨೪ |

**ಆಧಾರ:** ನಿರ್ದೇಶಕರು ವ್ಯವಸಾಯೋತ್ಪನ್ನ ಮಾರುಕಟ್ಟೆ

## ಪ್ರಮುಖ ಮಾರುಕಟ್ಟೆಗಳು

ರಾಜ್ಯಾದಂತ ಕೆಲವು ಆಯ್ದ ಪ್ರಮುಖ ವ್ಯವಸಾಯ ಹುಟ್ಟುವಳಿಗಳಿಗೆ ಕೆಲವು ಸ್ಥಳಗಳು ಪ್ರಮುಖ ಮಾರುಕಟ್ಟೆಗಳಾಗಿ ಕಾರ್ಯನಿರ್ವಹಿಸುತ್ತಿವೆ. ೨೦೧೧-೧೨ರಲ್ಲಿ ನಿಯಂತ್ರಿತ ಹುಟ್ಟುವಳಿಗಳು ಮಾರಾಟಕ್ಕೆ ಬಂದ (ಆವಕ) ಪ್ರಮಾಣದ ಆಧಾರದಲ್ಲಿ ಈ ಕೆಳಗಿನವುಗಳನ್ನು ಆಯಾ ವ್ಯವಸಾಯ ಹುಟ್ಟುವಳಿಗಳ ಪ್ರಮುಖ ನಿಯಂತ್ರಿತ ಮಾರುಕಟ್ಟೆಗಳೆಂದು ಗುರುತಿಸಲಾಗಿದೆ. ಅವುಗಳ ವಿವರಣೆ ಈ ಮುಂದಿನಂತಿದೆ.

## ಪ್ರಮುಖ ಮಾರುಕಟ್ಟೆ ಸ್ಥಳಗಳು

**ಹತ್ತಿ:** ಬಿಜಾಪುರ, ರಾಣೆಬೆನ್ನೂರು, ಬೈಲಹೊಂಗಲ, ರಾಯಚೂರು, ಸಂತೆ ಸರಗೂರು, ಹಾವೇರಿ, ಸೌಂದತ್ತಿ, ಹುಬ್ಬಳ್ಳಿ, ಧಾರವಾಡ, ಬಳ್ಳಾರಿ, ಮತ್ತು ನರಗುಂದ.

**ಸೇಂಗಾ (ಕಡಲೆಕಾಯಿ):** ಚಳ್ಳಕೆರೆ, ಗದಗ, ಚಿತ್ರದುರ್ಗ, ರಾಯಚೂರು, ದಾವಣಗೆರೆ, ಮತ್ತು ಹುಬ್ಬಳ್ಳಿ.

**ಒಣ ಮೆಣಸಿನಕಾಯಿ:** ಬ್ಯಾಡಗಿ, ಹುಬ್ಬಳ್ಳಿ, ರಾಣೇಬೆನ್ನೂರು, ಮತ್ತು ಹಾವೇರಿ.

**ಅಡಿಕೆ :** ಶಿವಮೊಗ್ಗ, ಸಾಗರ, ಸಿರ್ಸಿ, ಮಂಗಳೂರು, ಚಿತ್ರದುರ್ಗ.

**ತೆಂಗು:** ಕಡೂರು, ತರಿಕೆರೆ, ಕೆ.ಆರ್.ಪೇಟೆ, ತಿಪಟೂರು (ಕೊಬ್ಬರಿ) ಅರಸೀಕೆರೆ, ಮಂಡ್ಯ, ಮತ್ತು ಚನ್ನರಾಯಪಟ್ಟಣ.

**ಹಣ್ಣು ಹೂವು ಮತ್ತು ತರಕಾರಿ:** ಬೆಂಗಳೂರು, ಮೈಸೂರು, ಬೆಳಗಾವಿ, ಮತ್ತು ಹುಬ್ಬಳ್ಳಿ

**ಜೋಳ:** ಗದಗ, ಹಾವೇರಿ, ಬೆಳಗಾವಿ, ಮತ್ತು ಧಾರವಾಡ.

**ಗೋಧಿ:** ಗದಗ, ಬಿಜಾಪುರ, ಬೆಳಗಾವಿ, ಮತ್ತು ಧಾರವಾಡ.

**ರಾಗಿ:** ಅರಸೀಕೆರೆ, ಹಾಸನ, ತುಮಕೂರು, ಮತ್ತು ಹರಪನಹಳ್ಳಿ.

**ತೊಗರಿಬೇಳೆ:** ಗುಲಬರ್ಗ, ಬೀದರ, ಯಾದಗಿರಿ, ಸೇಡಮ್, ಚಿತ್ತಾಪುರ, ಮತ್ತು ರಾಯಚೂರು.

**ವೀಳ್ಯದೆಲೆ:** ಹೊನ್ನಾವರ, ಧಾರವಾಡ, ರಾಣೇಬೆನ್ನೂರು, ಸವಣೂರು, ತುಮಕೂರು, ಮತ್ತು ಚನ್ನಪಟ್ಟಣ.



**ಈರುಳ್ಳಿ(ಉಳ್ಳಾಗಡ್ಡಿ):** ಬೆಂಗಳೂರು, ಹುಬ್ಬಳ್ಳಿ, ಬೆಳಗಾವಿ, ದಾವಣಗೆರೆ,ಚಳ್ಳಕೆರೆ, ಮತ್ತು ಮೈಸೂರು.

**ಆಲೂಗಡ್ಡೆ:** ಮೈಸೂರು, ಮಾಲೂರು. ಚಿಕ್ಕಬಳ್ಳಾಪುರ, ಬೆಂಗಳೂರು, ಹಾಸನ, ಬೆಳಗಾವಿ, ಮತ್ತು ಹುಬ್ಬಳ್ಳಿ.

**ಸಾಂಬಾರ ವಸ್ತುಗಳು:** ಮಡಿಕೇರಿ, ಗೋಣಿಕೊಪ್ಪಲು, ಮೂಡಿಗೆರೆ, ಮತ್ತು ಸಕಲೇಶಪುರ.

**ರೇಷ್ಮೆ:** ರಾಮನಗರ, ಚನ್ನಪಟ್ಟಣ, ಕನಕಪುರ, ಶಿಡ್ಲಘಟ್ಟ, ವಿಜಯಪುರ, ಮತ್ತು ಕೊಳ್ಳೇಗಾಲ.

**ಎಳನೀರು:** ಮದ್ದೂರು

## ಕರ್ನಾಟಕ ರಾಜ್ಯ ಉಗ್ರಾಣ ನಿಗಮ

ಕರ್ನಾಟಕ ರಾಜ್ಯ ಉಗ್ರಾಣ ನಿಗಮವು ಕೃಷಿ ಉತ್ಪನ್ನ (ಅಭಿವೃದ್ಧಿ ಮತ್ತು ಉಗ್ರಾಣ) ನಿಗಮಗಳ ಕಾಯ್ದೆ ೧೯೫೬ರ ಪ್ರಕಾರ ೧೯೫೭ರಲ್ಲಿ ಅಸ್ತಿತ್ವಕ್ಕೆ ಬಂದಿದ್ದು, ತದನಂತರ ಉಗ್ರಾಣ ನಿಗಮಗಳ ಕಾಯ್ದೆ ೧೯೬೨ರ ವ್ಯಾಪ್ತಿಗೊಳಪಟ್ಟಿರುತ್ತದೆ. ಕೇಂದ್ರ ಉಗ್ರಾಣ ನಿಗಮ ಮತ್ತು ರಾಜ್ಯ ಸರ್ಕಾರ, ಕರ್ನಾಟಕ ರಾಜ್ಯ ಉಗ್ರಾಣ ನಿಗಮದ ೫೦:೫೦ ಸಮಪಾಲು ಷೇರುದಾರರಾಗಿರುತ್ತಾರೆ. ಈ ನಿಗಮವು ರೈತರ ಬಳಿಯ ಹೆಚ್ಚಿನ ಪ್ರಮಾಣದ ಕೃಷಿ ಉತ್ಪನ್ನಗಳಿಗೆ ವೈಜ್ಞಾನಿಕವಾಗಿ ಹಾಗೂ ಮಿತವ್ಯಯದಲ್ಲಿ ಉನ್ನತ ಮಟ್ಟದ ಶೇಖರಣೆ ವ್ಯವಸ್ಥೆಯನ್ನು ನೀಡುತ್ತದೆ. ಸರ್ಕಾರದ ಅನುಮೋದನೆಯಂತೆ ಆರ್.ಐ.ಡಿ.ಎಫ್ –XIV, XX ಮತ್ತು RKVY ಯೋಜನೆಯಡಿಯಲ್ಲಿ ೮೨,೧೦೦ ಮೆ.ಟನ್ ಸಾಮರ್ಥ್ಯದ ಗೋದಾಮುಗಳನ್ನು ಒಟ್ಟು ₹ ೪,೦೨೬.೯೩ ಲಕ್ಷಗಳಲ್ಲಿ ಪೂರ್ಣಗೊಳಿಸಿ ಉಗ್ರಾಣ ಚಟುವಟಿಕೆಗಳಿಗಾಗಿ ೨೦೧೦–೧೧ನೇ ಸಾಲಿನಲ್ಲಿ ಅರ್ಪಿಸಲಾಗಿರುತ್ತದೆ. ರಾಜ್ಯದಲ್ಲಿ ಸಹಕಾರಿ ಇಲಾಖೆಯ ೧೧೯ ಗೋದಾಮುಗಳು ಮತ್ತು ಕೆ.ಎಫ್.ಸಿ.ಎಫ್.ಸಿ ಯ ೨೦೮ ಗೋದಾಮುಗಳು ಇದ್ದು, ಇವುಗಳ ಒಟ್ಟು ಸಾಮರ್ಥ್ಯ ೨,೩೫,೭೭೫ ಮೆ.ಟನ್ನು ಇರುತ್ತದೆ. ಅಲ್ಲದೆ, ವಿವಿಧ ವರ್ಗಕ್ಕೆ ಸೇರಿದ ೮,೨೯೦ ಸಂಘಗಳಲ್ಲಿ ೪,೫೩೩ ಸಹಕಾರ ಸಂಘಗಳಲ್ಲಿ ಉಗ್ರಾಣಗಳಿದ್ದು, ಅವುಗಳಲ್ಲಿ ೩,೯೩೯ ಉಗ್ರಾಣಗಳು ಕಾರ್ಯ ನಿರ್ವಹಿಸುತ್ತಿದ್ದು, ಇವುಗಳ ಒಟ್ಟು ಸಾಮರ್ಥ್ಯ ೪೪,೨೦,೪೦೨ ಮೆ.ಟನ್ನುಗಳಾಗಿತ್ತು.

